# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಶುಕ್ರವಾರ, ಮಾರ್ಚ್ 26, 2021

ಸಂಪುಟ : 47 ಸಂಚಿಕೆ : 326 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com


## ಮಾಸ್ಕ್ ಧರಿಸದಿದ್ದರೆ 250 ರೂ. ದಂಡ

### ನಿಯಮ ಮೀರಿ ಸಮಾರಂಭ ನಡೆಸಿದರೆ 10 ಸಾವಿರ ರೂ. ದಂಡ

ಬೆಂಗಳೂರು, ಮಾ. 25 - ಕೊರೊನಾ ಸೋಂಕು ನಿವಾರಣೆಗಾಗಿ ಮಾಸ್ಕ್ ಧರಿಸದೇ ರಸ್ತೆಗಿಳಿದರೆ, 250 ರೂ. ದಂಡ, ನಿಯಮಗಳನ್ನು ಮೀರಿ ಸಭೆ, ಸಮಾರಂಭಗಳನ್ನು ನಡೆಸಿದರೆ ಹತ್ತು ಸಾವಿರ ದಂಡ ವಿಧಿಸಲು ಸ್ಥಳೀಯ ಸಂಸ್ಥೆಗಳಿಗೆ ರಾಜ್ಯ ಸರ್ಕಾರ ಅಧಿಕಾರ ನೀಡಿ ಆದೇಶ ಹೊರಡಿಸಿದೆ.

ನಗರ ಪಾಲಿಕೆ ವ್ಯಾಪ್ತಿಯಲ್ಲಿ 250 ರೂ ದಂಡ, ಉಳಿದೆಡೆ 100 ರೂ ದಂಡ ವಿಧಿಸಲಾಗುವುದು. ಸಭೆ, ಸಮಾರಂಭಗಳಿಗೆ 500 ಜನಕ್ಕಿಂತ ಹೆಚ್ಚು ಜನ ಮೀರಬಾರದು, ನಾಲ್ಕು ಗೋಡೆಗಳ ಮಧ್ಯೆಯಾದರೆ, 100 ರಿಂದ 200 ಮಂದಿ ಅಷ್ಟೇ ಭಾಗವಹಿಸಬೇಕು, ಅದಕ್ಕಿಂತ ಹೆಚ್ಚು ಮಂದಿ ಭಾಗವಹಿಸಿದರೆ ದಂಡ ತೆರಬೇಕಾಗುತ್ತದೆ. ರಾಜ್ಯದಲ್ಲಿ ಕೊರೊನಾ ಸೋಂಕು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವ (2ನೇ ಪುಟಕ್ಕೆ)

## ಭದ್ರಾ ಮೇಲ್ದಂಡೆಗೆ ಹೂಡಿಕೆ ಸಮಿತಿ ಅನುಮೋದನೆ

ಬೆಂಗಳೂರು, ಮಾ. 25 - ಭದ್ರಾ ಮೇಲ್ದಂಡೆ ಯೋಜನೆಯ 16,125 ಕೋಟಿ ರೂ. ಯೋಜನೆಗೆ ಕೇಂದ್ರ ಜಲಶಕ್ತಿ ಸಚಿವಾಲಯದ ಹೂಡಿಕೆ ಸಮಿತಿ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಟ್ವಿಟ್ಟರ್ ಮೂಲಕ ಈ ವಿಷಯ ತಿಳಿಸಿದ್ದು, ಅನುಮೋದನೆಗಾಗಿ ಹರ್ಷ ವ್ಯಕ್ತಪಡಿಸಿದ್ದಾರೆ. ಈ ಯೋಜನೆಯಿಂದ ದಾವಣಗೆರೆ, ಚಿತ್ರದುರ್ಗ, ತುಮಕೂರು ಹಾಗೂ ಚಿಕ್ಕಮಗಳೂರು ಜಿಲ್ಲೆಗಳಿಗೆ ಅನುಕೂಲವಾಗಲಿದೆ ಎಂದಿರುವ ಯಡಿಯೂರಪ್ಪ, ತಮ್ಮ ಮನವಿಗೆ ಸ್ಪಂದಿಸಿ ಯೋಜನೆಗೆ ಅನುಮೋದನೆ ದೊರಕಿಸಿ ಕೊಟ್ಟ ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೆಖಾವತ್ ಅವರಿಗೆ ಅಭಿನಂದನೆ ಸಲ್ಲಿಸುವುದಾಗಿ ಹೇಳಿದ್ದಾರೆ.

# ಹಬ್ಬಗಳ ಸಾರ್ವಜನಿಕ ಆಚರಣೆಗೆ ತಡೆ

ಬೆಂಗಳೂರು, ಮಾ. 25 – ಯುಗಾದಿ, ಹೋಳಿ, ಶಬ್ - ಎ ಬರಾತ್, ಗುಡ್ ಫ್ರೈಡೆ ಸೇರಿದಂತೆ ಹಬ್ಬಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಆಚರಿಸದಂತೆ ರಾಜ್ಯ ಸರ್ಕಾರ ನಿಷೇಧಿಸಿ ಆದೇಶ ಹೊರಡಿಸಿದೆ.

ಕೊರೊನಾ ಹರಡುತ್ತಿರುವ ಹಿನ್ನೆಲೆಯಲ್ಲಿ ವಿಕೋಪ ನಿರ್ವಹಣಾ ಕಾಯ್ದೆಯ ಅನ್ವಯ ಈ ಕ್ರಮ ತೆಗೆದುಕೊಳ್ಳುತ್ತಿರುವುದಾಗಿ ರಾಜ್ಯ ಮುಖ್ಯ ಕಾರ್ಯದರ್ಶಿ ಪಿ. ರವಿ ಕುಮಾರ್ ಹೊರಡಿಸಿರುವ ಆದೇಶದಲ್ಲಿ ತಿಳಿಸಲಾಗಿದೆ.

ಜನರು ಹಬ್ಬಗಳ ಸಮಯದಲ್ಲಿ ಗುಂಪು ಗೂಡುವುದರಿಂದ ರಾಜ್ಯದಲ್ಲಿ ಕೊರೊನಾ ತಡೆಯಲು ಅಡ್ಡಿಯಾಗುತ್ತದೆ. ಈ ಹಿನ್ನೆಲೆಯಲ್ಲಿ ಹಬ್ಬಗಳ ಸಮಯದಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಜನ ಸೇರುವುದನ್ನು ತಡೆಯಬೇಕಾಗಿದೆ ಎಂದು ಆದೇಶದಲ್ಲಿ ಹೇಳಲಾಗಿದೆ.

ಸಾರ್ವಜನಿಕ ಸ್ಥಳಗಳು, ಸಾರ್ವಜನಿಕ ಮೈದಾನಗಳು, ಸಾರ್ವಜನಿಕ ಪಾರ್ಕುಗಳು, ಮಾರುಕಟ್ಟೆ, ಧಾರ್ಮಿಕ ಸ್ಥಳ ಮತ್ತಿತರೆ ಕಡೆಗಳಲ್ಲಿ ಹಬ್ಬದ ಸಮಯದಲ್ಲಿ ಜನ ಸೇರುವುದನ್ನು ತಡೆಯಬೇಕೆಂದು ತಿಳಿಸಲಾಗಿದೆ. ಸರ್ಕಾರದ ಆದೇಶವನ್ನು ಉಲ್ಲಂಘಿಸಿದರೆ ವಿಕೋಪ ನಿರ್ವಹಣೆ ಕಾಯ್ದೆಯಡಿ ಕ್ರಮ ತೆಗೆದುಕೊಳ್ಳಲಾಗುವುದು ಎಂದೂ ಸಹ ಎಚ್ಚರಿಕೆ ನೀಡಲಾಗಿದೆ. ರಾಜ್ಯದಲ್ಲಿ ಕೊರೊನಾ ಸೋಂಕು (2ನೇ ಪುಟಕ್ಕೆ)

## ಕೊರೊನಾ : ರಂಗಿನಾಟ ಮನೆಗಷ್ಟೇ ಸೀಮಿತ



ದಾವಣಗೆರೆ, ಮಾ. 25 – ಕೊರೊನಾ ಹಿನ್ನೆಲೆಯಲ್ಲಿ ಹೋಳಿ ಹಬ್ಬವನ್ನು ಮನೆಗೆ ಸೀಮಿತಗೊಳಿಸಬೇಕು, ಸಾರ್ವಜನಿಕವಾಗಿ ಹೋಳಿ ಆಚರಿಸಬಾರದು. ಡಿ.ಜೆ. ಹಾಗೂ ಸಾರ್ವಜನಿಕರಿಗೆ ಹೋಳಿ ನೀರು ಸಿಂಪಡಿಸುವುದರ ಮೇಲೆ ಸಂಪೂರ್ಣ ನಿಷೇಧ ಇದೆ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದ್ದಾರೆ.

ಬರುವ ಮಾ. 28ರ ಕಾಮ ದಹನ, ಮಾ. 29ರ ಹೋಳಿ, ಶಬ್-ಎ-ಬರಾತ್, ಪಾಲಿಕೆ ಎರಡು ವಾರ್ಡ್‌ಗಳ ಉಪ ಚುನಾವಣೆ ಮತ್ತು ಗ್ರಾಮ ಪಂಚಾಯ್ತಿ ಚುನಾವಣೆಗಳ ಹಿನ್ನೆಲೆಯಲ್ಲಿ ಕರೆಯಲಾಗಿದ್ದ ನಾಗರಿಕ ಸೌಹಾರ್ದ ಸಭೆಯ ಅಧ್ಯಕ್ಷತೆ ವಹಿಸಿ ಅವರು (2ನೇ ಪುಟಕ್ಕೆ)

**ಹಬ್ಬ-ಜಾತ್ರೆ ದಿನಗಳಲ್ಲಿ ಮಾರ್ಗಸೂಚಿ ಪಾಲಿಸದಿದ್ದರೆ ದಂಡದ ಎಚ್ಚರಿಕೆ : ಜಿಲ್ಲಾಧಿಕಾರಿ**

### 34,750 ರೂ. ದಂಡ ವಸೂಲಿ

ದಾವಣಗೆರೆಯ ವಿವಿಧೆಡೆ ದಾಳಿ ಮಾಡಿರುವ ಪೊಲೀಸರು ಮಾಸ್ಕ್ ಹಾಕದ 139 ಜನರಿಂದ 34750 ರೂ.ಗಳ ದಂಡ ವಿಧಿಸಿದ್ದಾರೆ.

## 'ದಾವಣಗೆರೆ ಆನ್ ಮ್ಯಾಪ್' ಮೊಬೈಲ್ ಆ್ಯಪ್ ಲೋಕಾರ್ಪಣೆ



ದಾವಣಗೆರೆ, ಮಾ.25- ಜನ ಸಾಮಾನ್ಯರಿಗೆ ಸರ್ಕಾರಿ ಕಚೇರಿ, ಆಸ್ಪತ್ರೆ, ಯಾತ್ರಾ ಸ್ಥಳ, ಜನೌಷಧಿ ಕೇಂದ್ರ ಇತ್ಯಾದಿ ಮಾಹಿತಿಯನ್ನು ಸುಲಭವಾಗಿ ತಲುಪಿಸುವ ಉದ್ದೇಶದಿಂದ 'ದಾವಣಗೆರೆ ಆನ್ ಮ್ಯಾಪ್' ಮೊಬೈಲ್ ಆ್ಯಪ್ ಅಭಿವೃದ್ಧಿಪಡಿಸಿದ್ದು, ಸಾರ್ವಜನಿಕರು ಉಪಯೋಗ ಪಡೆದುಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಹೇಳಿದರು.

ಕೇಂದ್ರ ಸರ್ಕಾರದ ಸೂಚನೆ ಹಿನ್ನೆಲೆಯಲ್ಲಿ ಜಿಲ್ಲೆಯ ನ್ಯಾಷನಲ್ ಇನ್‌ಫರ್ಮ್ಯಾಟಿಕ್ಸ್ ಸೆಂಟರ್ (ಎನ್‌ಐಸಿ) ಅಧಿಕಾರಿಗಳು (2ನೇ ಪುಟಕ್ಕೆ)

## ಎರಡನೇ ದಿನವೂ ಪೆಟ್ರೋಲ್ ಇಳಿಕೆ

ನವದೆಹಲಿ, ಮಾ. 25 - ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಗಳು ಸತತ ಎರಡನೇ ದಿನ ಇಳಿಕೆಯಾಗಿವೆ. ಪೆಟ್ರೋಲ್ ಬೆಲೆಯನ್ನು 21 ಪೈಸೆ ಹಾಗೂ ಡೀಸೆಲ್ ಬೆಲೆಯನ್ನು ಲೀಟರ್‌ಗೆ 20 ಪೈಸೆ ಇಳಿಕೆ ಮಾಡಲಾಗಿದೆ.

ಸ್ಥಳೀಯ ತೆರಿಗೆಗಳಿಗೆ ಅನುಗುಣವಾಗಿ ರಾಜ್ಯದಿಂದ ರಾಜ್ಯಕ್ಕೆ ಇಳಿಕೆಯಲ್ಲಿ ವ್ಯತ್ಯಾಸವಾಗಲಿದೆ. ಬಹುತೇಕ ಒಂದು ವರ್ಷದ ನಂತರ ನಿನ್ನೆ ಮೊದಲ ಬಾರಿಗೆ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಗಳಲ್ಲಿ ಇಳಿಕೆಯಾಗಿತ್ತು.


## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 25.03.2021ರ ಗುರುವಾರ ನಿಧನರಾದ ಮಹಾನಗರ ಪಾಲಿಕೆ ಗುತ್ತಿಗೆದಾರರ ಸಂಘದ ಮಾಜಿ ಅಧ್ಯಕ್ಷರಾದ

**ಶ್ರೀ ಎ.ಎಂ. ರಾಮಣ್ಣ**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

**ದಾವಣಗೆರೆ ಮಹಾನಗರ ಪಾಲಿಕೆ ಗುತ್ತಿಗೆದಾರರ ಸಂಘ (ರಿ.) ದಾವಣಗೆರೆ.**

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 25.03.2021ರಂದು ನಮ್ಮನ್ನಗಲಿದ
ಅಜಾತ ಶತ್ರು, ಹಿತೈಷಿಗಳು,
ನಮ್ಮೆಲ್ಲರ ಮಾರ್ಗದರ್ಶಕರಾದ

**ಶ್ರೀಯುತ ಎ.ಎಂ. ರಾಮಣ್ಣನವರು**

ಮಹಾನಗರ ಪಾಲಿಕೆ ಗುತ್ತಿಗೆದಾರರ ಸಂಘದ ಮಾಜಿ ಅಧ್ಯಕ್ಷರು
ಇವರ ಆತ್ಮಕ್ಕೆ ಚಿರಶಾಂತಿ ಕೋರುತ್ತಾ,
ಮೃತರ ಕುಟುಂಬಕ್ಕೆ ದುಃಖ ಭರಿಸುವ ಶಕ್ತಿಯನ್ನು
ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

✦ ಉದಯ್ ಶಿವಕುಮಾರ್ ✦ ರವಿಕುಮಾರ್ ಹೆಚ್.ಆರ್. ✦ ಶಿವಕುಮಾರ್ ಕೆ. (ರಾಜು)
✦ ಜಯವಿಭವ ಬಿ. (ಸಂಜು) ✦ ಮಂಜು ಪಾಟೀಲ್ ಆರ್. ✦ ಮನೋಜ್ ಸಿ.ಜೆ.
✦ ಬಸವರಾಜ್ ಕೆ. ✦ ವೇಣು ಎಂ.ಎನ್. ✦ ಉಮಾಪತಿ ಬಿ.

## ಭಾವಪೂರ್ಣ ಶ್ರದ್ಧಾಂಜಲಿ



ದಿ|| ಶ್ರೀಮತಿ ಅನ್ನಪೂರ್ಣ
ಮತ್ತು ಕೊಂಡಜ್ಜಿ ಈಶ್ವರಪ್ಪನವರ
ಅಳಿಯಂದಿರೂ,
ದಾವಣಗೆರೆ ಜೆಜೆಎಂ
ಮೆಡಿಕಲ್ ಕಾಲೇಜಿನ ಗೈನಕಾಲಜಿ
ವಿಭಾಗದ ಪ್ರೊಫೆಸರ್ ಮತ್ತು
ತಜ್ಞ ವೈದ್ಯರೂ ಆದ

**ಡಾ|| ಮಂಜುನಾಥ್ ಜಿ.ಹೆಚ್.**


ಅವರು ದಿನಾಂಕ 25.03.2021ರ ಗುರುವಾರ ನಿಧನರಾದರು. ಮೃತರಿಗೆ 60 ವರ್ಷ ವಯಸ್ಸಾಗಿತ್ತು. ಪತ್ನಿ, ಶ್ರೀಮತಿ ಕವಿತಾ, ಇಬ್ಬರು ಸಹೋದರರು, ಮೂವರು ಸಹೋದರಿಯರು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಪಾರ್ಥಿವ ಶರೀರವನ್ನು ಇಂದು (26.03.2021) ಶುಕ್ರವಾರ ಮಧ್ಯಾಹ್ನ 12.30 ರವರೆಗೆ ದಾವಣಗೆರೆ ಎಂ.ಸಿ. ಕಾಲೋನಿ 'ಎ' ಬ್ಲಾಕ್‌ನಲ್ಲಿರುವ (ರೆಡ್ಡಿ ಬಿಲ್ಡಿಂಗ್ ಪಕ್ಕ) ಅವರ ಸ್ವಗೃಹದಲ್ಲಿ ಇರಿಸಲಾಗುವುದು. ನಂತರ ಮಧ್ಯಾಹ್ನ 2 ಗಂಟೆಗೆ ಅಂತ್ಯಕ್ರಿಯೆಯನ್ನು ಅವರ ಸ್ವಗ್ರಾಮ ಮಲೇಬೆನ್ನೂರಿನ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ಶ್ರದ್ಧಾಂಜಲಿ ಸಲ್ಲಿಸುವವರು :**

ಅಳಿಯಂದಿರಾದ
✦ ಶ್ರೀಮತಿ ಮತ್ತು ಶ್ರೀ ಜಯಪ್ರಕಾಶ್ ಕೊಂಡಜ್ಜಿ
✦ ಶ್ರೀಮತಿ ಮತ್ತು ಶ್ರೀ ಭೀಮರಾಜ್ ಕೊಂಡಜ್ಜಿ
✦ ಶ್ರೀಮತಿ ಮತ್ತು ಶ್ರೀ ಯೋಗೀಶ್ ಕೊಂಡಜ್ಜಿ
✦ ಶ್ರೀಮತಿ ಮತ್ತು ಶ್ರೀ ಗಿರೀಶ್ ಕೊಂಡಜ್ಜಿ
ಹಾಗೂ ಮಕ್ಕಳಾದ
✦ ಕು|| ಗಂಗಾ ಕೊಂಡಜ್ಜಿ, ಗಾನವಿ ಕೊಂಡಜ್ಜಿ, ತೇಜಸ್ ಕೊಂಡಜ್ಜಿ
ಮತ್ತು ಸಹೋದರ ✦ ಶ್ರೀಮತಿ ಮತ್ತು ಶ್ರೀ ಎಲಿಗಾರ್ ಸಿದ್ದಲಿಂಗಪ್ಪ

**ಅಂತರವಳ್ಳಿ ಮನೆತನದವರು, ಕೊಂಡಜ್ಜಿ ಗ್ರಾಮ.**

## ಡಾ|| ಜಿ.ಹೆಚ್. ಮಂಜುನಾಥ್ ನಿಧನ
(ಮಲೇಬೆನ್ನೂರು)



ಹರಿಹರ ತಾಲ್ಲೂಕು ಮಲೇಬೆನ್ನೂರು ಗ್ರಾಮದ ವಾಸಿ,
ದಿ|| ಗೌಡ್ರು ಹಾಲಪ್ಪ ಮತ್ತು ದಿ|| ಶ್ರೀಮತಿ ಸಾವಿತ್ರಮ್ಮ
ದಂಪತಿ ಪುತ್ರರೂ ಹಾಗು
ಗೌಡ್ರು ರಾಜಕುಮಾರ್ (ರಾಜಣ್ಣ) ಇವರ ಸಹೋದರರೂ,
ದಾವಣಗೆರೆಯ ಜಜಮು ವೈದ್ಯಕೀಯ ಮಹಾವಿದ್ಯಾಲಯದ
ಸ್ತ್ರೀ ರೋಗ ಮತ್ತು ಪ್ರಸೂತಿ ವಿಭಾಗದ ಪ್ರಾಧ್ಯಾಪಕರೂ ಆದ
**ಡಾ|| ಜಿ.ಹೆಚ್. ಮಂಜುನಾಥ್** ಅವರು
ದಿನಾಂಕ 25.03.2021ರ ಗುರುವಾರ
ಸಂಜೆ 6.10 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ ಸುಮಾರು 60 ವರ್ಷ ವಯಸ್ಸಾಗಿತ್ತು.
ಮೃತರ ಪಾರ್ಥಿವ ಶರೀರವನ್ನು ಎಂ.ಸಿ. ಕಾಲೋನಿ 'ಎ' ಬ್ಲಾಕ್,
ರೆಡ್ಡಿ ಬಿಲ್ಡಿಂಗ್ ಹತ್ತಿರ, ದಾವಣಗೆರೆ ಇಲ್ಲಿರುವ
ಅವರ ಸ್ವಗೃಹದಲ್ಲಿ ದಿನಾಂಕ 26.03.2021ರ ಶುಕ್ರವಾರ
ಮಧ್ಯಾಹ್ನ 12.30 ರವರೆಗೆ ಅಂತಿಮ ದರ್ಶನಕ್ಕೆ
ಇಡಲಾಗಿದ್ದು, ನಂತರ ಮಧ್ಯಾಹ್ನ 2 ಗಂಟೆಗೆ
ಅವರ ಸ್ವಂತ ಊರಾದ ಮಲೇಬೆನ್ನೂರಿನ
ವೀರಶೈವ ರುದ್ರಭೂಮಿಯಲ್ಲಿ
ಅಂತ್ಯಕ್ರಿಯೆಯನ್ನು ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**

ಮೃತರ ಧರ್ಮಪತ್ನಿ : ಶ್ರೀಮತಿ ಕವಿತಾ ಡಾ|| ಜಿ.ಹೆಚ್. ಮಂಜುನಾಥ್
ಶ್ರೀಮತಿ ಶಕುಂತಲಮ್ಮ ಮತ್ತು ದಿ|| ಆರ್. ಪಾಟೀಲ್, ಬ್ಯಾಡಗಿ
ಶ್ರೀಮತಿ ಮತ್ತು ಶ್ರೀ ಜಿ.ಹೆಚ್. ರಾಜಕುಮಾರ್ (ರಾಜಣ್ಣ) ಮಲೇಬೆನ್ನೂರು.
ಮಕ್ಕಳಾದ ಶ್ರೀಮತಿ ಮತ್ತು ಶ್ರೀ ಜಿ.ಆರ್. ಸಿದ್ದೇಶ್, ಶ್ರೀಮತಿ ಮತ್ತು ಶ್ರೀ ಜಿ.ಆರ್. ಸಂತೋಷ್
ಶ್ರೀಮತಿ ಮತ್ತು ಶ್ರೀ ಡಾ|| ಜಿ.ಆರ್. ಸುಮನ್, ಪ್ರಾಧ್ಯಾಪಕರು, ಜನರಲ್ ಮೆಡಿಸಿನ್ ವಿಭಾಗ, ಎಸ್.ಎಸ್.ಆಸ್ಪತ್ರೆ, ದಾವಣಗೆರೆ.
ಶ್ರೀಮತಿ ಮತ್ತು ಶ್ರೀ ಜಿ.ಹೆಚ್. ಶಿವಕುಮಾರ್, ಮಲೇಬೆನ್ನೂರು.
ಮಕ್ಕಳಾದ ಶ್ರೀಮತಿ ಮತ್ತು ಶ್ರೀ ಜಿ.ಎಸ್. ಹರ್ಷ, ಶ್ರೀಮತಿ ಆಶಾ ಪ್ರಶಾಂತ್
ಶ್ರೀಮತಿ ಮತ್ತು ಶ್ರೀ ಎಂ.ಎಸ್. ಪಾಟೀಲ್ ಮತ್ತು ಮಕ್ಕಳು, ದಾವಣಗೆರೆ.
ಶ್ರೀಮತಿ ಮತ್ತು ಶ್ರೀ ಡಾ|| ಮಲ್ಲಿಕಾರ್ಜುನ್ ಸಾಲೇರ ಮತ್ತು ಸಹೋದರರು, ಭದ್ರಾವತಿ
ಶ್ರೀಮತಿ ಮತ್ತು ಶ್ರೀ ಅಣಬೇರು ಜಗದೀಶ್, ದಾವಣಗೆರೆ.

ಹಾಗೂ ಮಲೇಬೆನ್ನೂರು ಗೌಡ್ರ ವಂಶಸ್ಥರು ಮತ್ತು ಬಂಧುಗಳು.
ಅಳಿಯಂದಿರಾದ ಶ್ರೀಮತಿ ಮತ್ತು ಶ್ರೀ ಜಯಪ್ರಕಾಶ್ ಕೊಂಡಜ್ಜಿ, ಶ್ರೀಮತಿ ಮತ್ತು ಶ್ರೀ ಭೀಮರಾಜ್ ಕೊಂಡಜ್ಜಿ
ಶ್ರೀಮತಿ ಮತ್ತು ಶ್ರೀ ಯೋಗೀಶ್ ಕೊಂಡಜ್ಜಿ, ಶ್ರೀಮತಿ ಮತ್ತು ಶ್ರೀ ಗಿರೀಶ್ ಕೊಂಡಜ್ಜಿ ಮತ್ತು ಮಕ್ಕಳು, ದಾವಣಗೆರೆ.

# ಬಾಗಳಿಯನ್ನು ಜಿ.ಪಂ ಕ್ಷೇತ್ರವನ್ನಾಗಿಸಲು ಮನವಿ



ಹರಪನಹಳ್ಳಿ, ಮಾ.25- ಬಾಗಳಿ ಯನ್ನು ಜಿಲ್ಲಾ ಪಂಚಾಯ್ತಿ ಕ್ಷೇತ್ರವನ್ನಾಗಿಸಲು ರಾಜ್ಯ ಚುನಾವಣಾ ಆಯೋಗ ಮತ್ತು ಪಂಚಾಯತ್ ರಾಜ್ಯ ಸಚಿವ ಈಶ್ವರಪ್ಪ ಅವರಿಗೆ ಬಾಗಳಿ ವ್ಯಾಪ್ತಿಯ ಗ್ರಾಮಸ್ಥರ ಪರವಾಗಿ ಮನವಿ ಸಲ್ಲಿಸಲಾಯಿತು.

ಗ್ರಾಮಸ್ಥರ ಪರವಾಗಿ ಮನವಿಯನ್ನು ನೀಡಿ, ಬೀಚಿ ಅಭಿಮಾನಿ ಬಳಗದ ಅಧ್ಯಕ್ಷ ಎಸ್. ನಿಂಗರಾಜ್, ಎಸ್.ಬಸವರಾಜ್ ಮಾತನಾಡಿ, ಹಿಂದೆ 1990ರ ದಶಕದಲ್ಲಿ ಕೋಡಿ ಹಳ್ಳಿ, ಕೂಲಹಳ್ಳಿ, ಶೃಂಗಾರತೋಟ, ಕಾಯಕದ ಹಳ್ಳಿ, ಕಣಿವಿಹಳ್ಳಿ, ನಂದಿಬೇವೂರು, ಬಾಗಳಿ, ಒಳಗೊಂಡ ಬಾಗಳಿ ಮಂಡಲ ಪಂಚಾಯಿತಿ ಯಾಗಿ ಕೆಲಸ ನಿರ್ವಹಿಸಿದೆ. ಇದಕ್ಕೆ ಸಾಕ್ಷ್ಯಾಧಾರ ಗಳು ಇವೆ. ಆದರೆ, ತಾಲ್ಲೂಕಿನ ಕಂದಾಯ ಮತ್ತು ಚುನಾವಣಾ ಸಿಬ್ಬಂದಿಗಳು ಕಂದಾಯ ಗ್ರಾಮ ಮತ್ತು ಜನಸಂಖ್ಯೆ ನೆಪದ ಮೂಲಕ ಈ ಗ್ರಾಮದ ಬದಲಾಗಿ ಗಡಿಭಾಗದ ಗ್ರಾಮವನ್ನು ಆಯ್ಕೆ ಮಾಡಿಕೊಂಡು ವರದಿ ಕಳುಹಿಸುವುದು ಸೂಕ್ತವಲ್ಲ. ಈ ಭಾಗದ ನಾಲ್ಕೈದು ಗ್ರಾ.ಪಂ.ಗಳನ್ನು ಸೇರಿಸಿ ಬಾಗಳಿಯನ್ನು ಜಿಲ್ಲಾ ಪಂಚಾಯ್ತಿ ಕ್ಷೇತ್ರವನ್ನಾಗಿಸಿ ಆದೇಶಿಸಬೇಕು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಕಾನೂನು ಹೋರಾಟವನ್ನು ಆರಂಭಿಸಲಾಗುವುದು ಎಂದು ಎಚ್ಚರಿಸಿದ್ದಾರೆ.

ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರಪ್ಪ ಮನವಿ ಸ್ವೀಕರಿಸಿ ಮಾತನಾಡಿ, ತಾಲ್ಲೂಕು ಪಂಚಾ ಯಿತಿ, ಜಿಲ್ಲಾ ಪಂಚಾಯಿತಿಯ ಪುನರ್ ವಿಂಗಡಣೆ ಬಗ್ಗೆ ಸದನದಲ್ಲಿ ಚರ್ಚೆಯಾಗಿದೆ ಎಂದರು.

ಚುನಾವಣಾ ಆಯೋಗದ ಸಹ ಕಾರ್ಯದರ್ಶಿ ಹೊನ್ನಾಂಬ ಮಾತನಾಡಿ ಜನಸಂಖ್ಯೆ, ಭೌಗೋಳಿಕ ಆಧಾರದಲ್ಲಿ ಪುನರ್ ವಿಂಗಡಣೆ ಮಾಡಲಾಗುವುದು. ಇಲ್ಲಿಯವರೆಗೂ ಯಾವುದನ್ನೂ ಅಂತಿಮಗೊಳಿಸಿಲ್ಲ. ನಿಮ್ಮ ಮನವಿಯನ್ನು ನೀಡಿ, ಪರಿಶೀಲಿಸುವೆ ಎಂದರು.

**ತಕರಾರು ಅರ್ಜಿ:** ಹಾರಕನಾಳು ಕ್ಷೇತ್ರವನ್ನು ಜಿಲ್ಲಾ ಪಂಚಾಯಿತಿ ಮರು ವಿಂಗಡಣೆ ಕ್ಷೇತ್ರವಾಗಿ ಮೇಲ್ದರ್ಜೆಗೇರಿಸಲು ಎಲ್ಲಾ ಅರ್ಹತೆ ಹೊಂದಿದ್ದು, ಐದು ಕಂದಾಯ ಗ್ರಾಮಗಳನ್ನು ಹೊಂದಿರುತ್ತದೆ.

ಈ ಭಾಗದಲ್ಲಿ ಸುಮಾರು ಹದಿನೆಂಟು ಸಾವಿರಕ್ಕೂ ಹೆಚ್ಚು ಜನಸಂಖ್ಯೆ ಇದ್ದು, ಭೌಗೋಳಿಕ ವಿಸ್ತೀರ್ಣ ಹೊಂದಿದೆ. ಮಾಡ್ಲಿಗೇರಿ, ಗೌರಿಹಳ್ಳಿ, ತೊಗರಿಕಟ್ಟಿ ಈ ಗ್ರಾಮಗಳು ಹಾರಕನಾಳು ಮಂಡಲ ಪಂಚಾಯತಿಗೆ ಸೇರಿದ್ದವು. 1977 ರಲ್ಲಿ ಹಾರಕನಾಳು ಮಂಡಲದಿಂದ ವಿಭಜನೆ ಆಗಿರುತ್ತದೆ. ಸದ್ಯಕ್ಕೆ ಹಾರಕನಾಳು ಗ್ರಾಮ ಪಂಚಾಯತಿ ಇಪ್ಪತ್ತೂರು ಸದಸ್ಯರನ್ನು ಒಳಗೊಂಡು ಎ ಗ್ರೇಡ್ ಪಂಚಾಯತಿ ಆಗಿ ಕಾರ್ಯನಿರ್ವಹಿಸುತ್ತಿದೆ.

ಇದೀಗ ಅವೈಜ್ಞಾನಿಕವಾಗಿ ಅರ್ಹತೆ ಇಲ್ಲದ ಮಾಡ್ಲಿಗೇರಿ ಗ್ರಾಮಕ್ಕೆ ಜಿಲ್ಲಾ ಪಂಚಾಯಿತಿ ಕ್ಷೇತ್ರ ಮಾಡಲು ಹೊರಟಿರುವುದು ಖಂಡನೀಯ. ಚುನಾವಣಾಧಿಕಾರಿಗಳು ನ್ಯಾಯ ಸಮ್ಮತವಾಗಿ ಚುನಾವಣಾ ಸ್ಥಾನ ಹೊಂದಾಣಿಕೆ ಮಾಡಬೇಕು ಎಂದು ಹಾರಕನಾಳು ಕ್ಷೇತ್ರದಿಂದ ಗ್ರಾಮಸ್ಥರು ಹಾಗೂ ಪ್ರಮುಖ ಮುಖಂಡರಗಳು ಚುನಾವಣಾ ಆಯೋಗಕ್ಕೆ ತಕರಾರು ಅರ್ಜಿ ಸಲ್ಲಿಸಿದ್ದಾರೆ.

# ಕೊರೊನಾ : ರಂಗಿನಾಟ ಮನೆಗಷ್ಟೇ ಸೀಮಿತ



ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ನೇತೃತ್ವದ ತಂಡ ಗುರುವಾರ ಸಂಜೆ ಮಾಸ್ಕ್ ಧರಿಸದ ವಾಹನ ಚಾಲಕರಿಗೆ ದಂಡ ವಿಧಿಸಿ, ಸರ್ಕಾರದ ಮಾರ್ಗಸೂಚಿ ಪಾಲಿಸುವಂತೆ ಮನವಿ ಮಾಡಿದರು.

(1ನೇ ಪುಟದಿಂದ) ಮಾತನಾಡುತ್ತಿದ್ದರು.

ಕೊರೊನಾ ಹಿನ್ನೆಲೆಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕಟ್ಟುನಿಟ್ಟಿನ ಮಾರ್ಗಸೂಚಿ ಬಿಡುಗಡೆ ಮಾಡಿವೆ. ಅದರ ಅನ್ವಯ ಮಾಸ್ಕ್ ಧರಿಸದಿದ್ದರೆ 250 ರೂ. ದಂಡ ವಿಧಿಸಲಾಗುವುದು ಹಾಗೂ ನಿಗದಿಗಿಂತ ಹೆಚ್ಚು ಜನ ಸಭೆ - ಸಮಾರಂಭಗಳಲ್ಲಿ ಸೇರಿದರೆ ಆಯೋಜಕರು ಹಾಗೂ ಕಟ್ಟಡ ಬಾಡಿಗೆ ನೀಡಿದವರಿಗೆ 10 ಸಾವಿರ ರೂ.ಗಳವರೆಗೆ ದಂಡ ವಿಧಿಸಲಾಗುವುದು ಎಂದವರು ಎಚ್ಚರಿಸಿದ್ದಾರೆ.

ಸಮಾರಂಭಕ್ಕೆ ಕಟ್ಟಡ ಬಾಡಿಗೆ ನೀಡುವವರು ಪದೇ ಪದೇ ನಿಯಮ ಉಲ್ಲಂಘಿಸಿದರೆ ಕ್ರಿಮಿನಲ್ ಮೊಕದ್ದಮೆ ಹೂಡಿ ಜೈಲಿಗೂ ಕಳಿಸಲಾಗುವುದು ಎಂದ ಬೀಳಗಿ, ಮೇ ವರೆಗೆ ಹಲವಾರು ಹಬ್ಬಗಳು ಹಾಗೂ ಜಾತ್ರೆಗಳು ಬರುತ್ತವೆ. ಈ ಅವಧಿಯಲ್ಲಿ ಸರ್ಕಾರದ ಮಾರ್ಗಸೂಚಿಗಳನ್ನು ಎಲ್ಲರೂ ಪಾಲಿಸಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ, ಮನೆಯಲ್ಲಿ ಹಾಗೂ ಕಾಂಪೌಂಡ್ ಒಳಗೆ ಓಕುಳಿ ಆಚರಿಸಬೇಕು. ಹಿಂದಿನ ದಿನಗಳಂತೆ ಹೋಳಿ ಹಬ್ಬಕ್ಕಾಗಿ ಬೀದಿಗೆ ಬಂದು ಜನಸಂದಣಿ ಮಾಡಬಾರದು ಎಂದು ತಿಳಿಸಿದರು.

ಮಾಸ್ಕ್ ಧರಿಸದಿದ್ದರೆ ದಂಡ ವಿಧಿಸುತ್ತಾರೆ ಎಂಬುದಕ್ಕಿಂತ ಹೆಚ್ಚಾಗಿ ಜೀವಕ್ಕೆ ಪ್ರಾಮುಖ್ಯತೆ ನೀಡಬೇಕು. ಜೀವ ಹೋದರೆ ಮತ್ತೆ ಸಿಗುವುದಿಲ್ಲ. ಜಿಲ್ಲೆಯಲ್ಲಿ ಕೊರೊನಾ ಸೋಂಕಿಗೆ ಗುರಿಯಾದವರಲ್ಲಿ ಮೂರ್ನಾಲ್ಕು ಜನರ ಆರೋಗ್ಯ ಸ್ಥಿತಿ ಗಂಭೀರವಾಗಿದೆ. ಇದನ್ನೆಲ್ಲ ಅರಿತು ಕೊರೊನಾ ಮಾರ್ಗಸೂಚಿ ಪಾಲಿಸಬೇಕು ಎಂದು ತಿಳಿಸಿದರು. ಪಾಲಿಕೆ ಮೇಯರ್ ಎಸ್.ಟಿ. ವೀರೇಶ್ ಮಾತನಾಡಿ, ಸ್ವಚ್ಛತೆಗೆ ಪಾಲಿಕೆ ಕ್ರಮ ತೆಗೆದುಕೊಳ್ಳುತ್ತಿದೆ. ಈ ವಿಷಯದಲ್ಲಿ ನಾಗರಿಕರ ಸಹಭಾಗಿತ್ವವೂ ಮುಖ್ಯ. ಕಸ ಸೃಷ್ಟಿಸುವವರು ನಾವೇ ಆಗಿರುವುದರಿಂದ, ನಿಭಾಯಿಸುವ ಪ್ರಮುಖ ಕರ್ತವ್ಯವೂ ನಮ್ಮ ಮೇಲಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಮುಖಂಡರಾದ ಕೆ.ಬಿ. ಶಂಕರನಾರಾಯಣ, ಸಾಧಿಕ್ ಪೈಲ್ವಾನ್, ವೈ. ಮಲ್ಲೇಶ್, ಅಮಾನುಲ್ಲಾ ಖಾನ್, ಸತೀಶ್ ಪೂಜಾರ್, ಸಿರಾಜ್, ಸೋಮಲಾಪುರ ಹನುಮಂತಪ್ಪ, ಹಾಲೇಶ್ ಮತ್ತಿತರರು ಜನರ ಆರೋಗ್ಯ ರಕ್ಷಣೆಗಾಗಿ ಸರ್ಕಾರ ಜಾರಿಗೆ ತಂದಿರುವ ಮಾರ್ಗಸೂಚಿಗಳನ್ನು ಜನರು ಪಾಲಿಸಬೇಕೆಂದು ಕರೆ ನೀಡಿದರು.

ಡಿಹೆಚ್‌ಓ ಡಾ. ನಾಗರಾಜ್, ಆರ್.ಟಿ.ಓ. ಶ್ರೀಧರ ಮಲ್ನಾಡ್, ಅಬಕಾರಿ ಉಪ ಆಯುಕ್ತ ಬಿ. ಶಿವಪ್ರಸಾದ್, ಜಿಲ್ಲಾ ಸರ್ಜನ್ ಡಾ. ಜಯಪ್ರಕಾಶ್, ಎ.ಎಸ್.ಪಿ. ರಾಜೀವ್ ಮತ್ತಿತರರು ಉಪಸ್ಥಿತರಿದ್ದರು. ಡಿವೈಎಸ್ಪಿ ನಾಗೇಶ್ ಐತಾಳ್ ಸ್ವಾಗತಿಸಿದರೆ, ವೃತ್ತ ನಿರೀಕ್ಷಕ ಗಜೇಂದ್ರ ವಂದಿಸಿದರು.

## 30 ರಂದು 'ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತ್ಯುತ್ಸವ'



ದಾವಣಗೆರೆ, ಮಾ. 25- ಅಖಿಲ ಭಾರತ ಜಂಗಮ ಮಹಾಸಭಾ ವತಿಯಿಂದ ಇದೇ ದಿನಾಂಕ 30 ರ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಇಲ್ಲಿನ ಶ್ರೀ ಸದ್ಯೋಜಾತ ಮಠದಲ್ಲಿ 'ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತ್ಯುತ್ಸವ' ಕಾರ್ಯಕ್ರಮ ನಡೆಯಲಿದೆ.

ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ಕಾರ್ಯಕ್ರಮ ಜರುಗಲಿದ್ದು, ಅಂದು ಬೆಳಿಗ್ಗೆ 5 ಗಂಟೆಗೆ ಜಂಗಮ ವಟುಗಳಿಗೆ ಅಯ್ಯಾಚಾರ ನಡೆಯಲಿದೆ. ನಂತರ ಬೆಳಿಗ್ಗೆ 6 ಗಂಟೆಗೆ ಇಲ್ಲಿನ ರೇಣುಕಾ ಮಂದಿರದಲ್ಲಿರುವ ಶ್ರೀ ರೇಣುಕಾಚಾರ್ಯರ ಮೂರ್ತಿಗೆ ಅಭಿಷೇಕ ನೆರವೇರಿಸಿ, ನಂತರ ಬೆಳಿಗ್ಗೆ 8.30 ಕ್ಕೆ ರೇಣುಕಾ ಮಂದಿರದಿಂದ ಕುಂಭ ಮೇಳದೊಂದಿಗೆ ಮೆರವಣಿಗೆ ಮೂಲಕ ಶ್ರೀ ಸದ್ಯೋಜಾತ ಮಠಕ್ಕೆ ತಲುಪಲಾಗುವುದು.

ಅಯ್ಯಾಚಾರ್ (ದೀಕ್ಷೆ) ಮಾಡಿಸಲು ಇಚ್ಛಿಸುವವರು ನಾಳೆ ದಿನಾಂಕ 26 ರೊಳಗಾಗಿ ಬಿ.ಎಂ. ವಾಗೀಶಯ್ಯ (99804-59146), ದಾಕ್ಷಾಯಣಮ್ಮ (94484 43095)ಗೆ ಕರೆ ಮಾಡಿ ಹೆಸರು, ವಿಳಾಸ ನೋಂದಾಯಿಸುವಂತೆ ಮಹಾಸಭಾದ ಅಧ್ಯಕ್ಷ ಅರುಣ್ ಕುಮಾರ್ ಜಡಿಮಠ್ ತಿಳಿಸಿದ್ದಾರೆ.

## ಶಾಮನೂರಿನ ಆಂಜನೇಯ ಸ್ವಾಮಿಗೆ ಎಸ್ಸೆಸ್ ಪೂಜೆ ಸಲ್ಲಿಕೆ



ದಾವಣಗೆರೆ, ಮಾ.25 - ಶಾಮನೂರಿನಲ್ಲಿ ನಿನ್ನೆ ಸರಳವಾಗಿ ನಡೆದ ಶ್ರೀ ಆಂಜನೇಯ ಸ್ವಾಮಿ ರಥೋತ್ಸವದ ಸಂದರ್ಭದಲ್ಲಿ ಶಾಸಕ ಡಾ॥ ಶಾಮನೂರು ಶಿವಶಂಕರಪ್ಪ ಅವರು ಪೂಜೆ ಸಲ್ಲಿಸಿದರು. ದೇವಸ್ಥಾನ ಸಮಿತಿಯವರು, ಮಾಜಿ ಛೇರ್ಮನ್ ರಾಮಚಂದ್ರಪ್ಪ, ಪಾಲಿಕೆ ಸದಸ್ಯ ಕಲ್ಲಳ್ಳಿ ನಾಗರಾಜ್ ಎಸ್ಸೆಸ್ ಅವರನ್ನು ಸ್ವಾಗತಿಸಿ ಸನ್ಮಾನಿಸಿದರು. ಆಂಜನೇಯ ಸ್ವಾಮಿಗೆ ಪೂಜೆ ಸಲ್ಲಿಸಿದ ನಂತರ ಈಶ್ವರ ದೇವಸ್ಥಾನಕ್ಕೂ ತೆರಳಿ ಎಸ್ಸೆಸ್ ಪೂಜೆ ಸಲ್ಲಿಸಿದರು.

## ಮಾಸ್ಕ್ ಧರಿಸದಿದ್ದರೆ 250 ರೂ. ದಂಡ

(1ನೇ ಪುಟದಿಂದ) ಹಿನ್ನೆಲೆಯಲ್ಲಿ ಕೆಲವು ಕಠಿಣ ನಿಯ ಮಗಳನ್ನು ಹೊರಡಿಸಿ, ಸರ್ಕಾರ ಆದೇಶ ಮಾಡಿದೆ,

ಈ ಮಧ್ಯೆ ಸುದ್ದಿಗಾರರೊಂದಿಗೆ ಮಾತನಾ ಡಿದ ಆರೋಗ್ಯ ಸಚಿವ ಡಾ. ಕೆ. ಸುಧಾಕರ್, ಕೊರೊನಾ ವೈರಸ್ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ರಾಜ್ಯದ ಜನರು ಎಚ್ಚರಿಕೆ ವಹಿಸಬೇಕು ಎಂದು ಕರೆ ನೀಡಿದ್ದಾರೆ. ದೇಶದಲ್ಲಿ ರೂಪಾಂತರಿ ವೈರಸ್ ವೇಗವಾಗಿ ಹರಡುತ್ತಿದ್ದು, 700ಕ್ಕೂ ಹೆಚ್ಚು ಜನರಲ್ಲಿ ಕಾಣಿಸಿಕೊಂಡಿದೆ. ಮುಂದಿನ ಎರಡು ತಿಂಗಳ ಕಾಲ ಎಚ್ಚರಿಕೆಯಿಂದ ಇರಿ. ಕೆಮ್ಮು, ನೆಗಡಿ ಕಾಣಿಸಿಕೊಂಡರೆ ನಿರ್ಲಕ್ಷ್ಯ ಮಾಡದೆ ವೈದ್ಯರ ಬಳಿ ತಪಾಸಣೆ ಮಾಡಿಸಿ ಎಂದು ಮನವಿ ಮಾಡಿದ್ದಾರೆ.

ತಡರಾತ್ರಿ 4 ಲಕ್ಷ ಡೋಸ್ ಲಸಿಕೆ ಬಂದಿದೆ. ಈ ವಾರದಲ್ಲಿ ಮತ್ತೆ 12 ಲಕ್ಷ ಡೋಸ್ ಬರಲಿದೆ. ಲಸಿಕೆ ಕೊರತೆಯಾಗದಂತೆ ನೋಡಿಕೊಳ್ಳುವ ಭರವಸೆಯಿತ್ತಿ ದ್ದಾರೆ. ರಾಜ್ಯದ ಎಲ್ಲಾ ಅರ್ಹ ನಾಗರಿಕರು, ನೋಂದಣಿ ಮಾಡಿಕೊಂಡು ಲಸಿಕೆ ಹಾಕಿಸಿಕೊಳ್ಳಿ ಎಂದು ಮನವಿ ಮಾಡಿದ್ದರಲ್ಲದೇ, ಪ್ರತಿಯೊಬ್ಬರು ತಮ್ಮ ಮನೆಯಲ್ಲಿ ಮತ್ತು ನೆರೆಹೊರೆಯವರಲ್ಲಿ ಲಸಿಕೆ ಪಡೆದುಕೊಳ್ಳುವಂತೆ ಪ್ರೋತ್ಸಾಹಿಸಿ ಎಂದು ಮನವಿ ಮಾಡಿದ್ದಾರೆ.

## ಹಬ್ಬಗಳ ಸಾರ್ವಜನಿಕ ಆಚರಣೆಗೆ ತಡೆ

(1ನೇ ಪುಟದಿಂದ) ಹರಡುವಿಕೆ ಇತ್ತೀಚಿನವರೆಗೂ ಕಡಿಮೆಯಾಗಿತ್ತಾದರೂ, ಮಾರ್ಚ್ ನಂತರದಲ್ಲಿ ತೀವ್ರವಾಗಿ ಏರುಮುಖವಾಗಿದೆ. ರಾಜ್ಯದಲ್ಲಿ ಎರಡನೇ ಕೊರೊನಾ ಅಲೆ ಆರಂಭವಾಗಿದೆ ಎಂದು ಆರೋಗ್ಯ ಸಚಿವ ಡಿ. ಸುಧಾಕರ್ ತಿಳಿಸಿದ್ದರು.

ಗುರುವಾರ ಒಂದೇ ದಿನ ರಾಜ್ಯದಲ್ಲಿ 2,523 ಸೋಂಕಿತರು ಪತ್ತೆಯಾಗಿದ್ದಾರೆ. ಸೋಂಕಿನಿಂದ ಹತ್ತು ಜನರು ಸಾವನ್ನಪ್ಪಿದ್ದಾರೆ. ಬೆಂಗಳೂರಿನಲ್ಲಿ 1,623 ಸೋಂಕಿತರು ಕಂಡು ಬಂದಿದ್ದಾರೆ.

# ಮಲೇಬೆನ್ನೂರಿನಲ್ಲಿ ಸಂಭ್ರಮದ ಉರುಸು



ಮಲೇಬೆನ್ನೂರು, ಮಾ.25- ಇಲ್ಲಿನ ಹಜರತ್ ಸೈಯದ್ ಹಬೀಬುಲ್ಲಾ ಷಾ ಖಾದ್ರಿ ಅವರ ಉರುಸು ಗುರುವಾರ ಸಂಭ್ರಮದಿಂದ ಜರುಗಿತು. ಬೆಳಿಗ್ಗೆಯಿಂದಲೂ ದರ್ಗಾದಲ್ಲಿ ಮುಸ್ಲಿಂ ಬಾಂಧವರು ಆಗಮಿಸಿ, ಚಾದರ ಹೊದಿಸಿ, ವಿಶೇಷ ಪ್ರಾರ್ಥನೆ ಸಲ್ಲಿಸಿದರು.

ಮಲೇಬೆನ್ನೂರು ಅಷ್ಟೇ ಅಲ್ಲದೇ ಹರಿಹರ, ದಾವಣಗೆರೆ, ರಾಣೇಬೆನ್ನೂರು, ವಿಜಾಪುರ, ಹೊನ್ನಾಳಿ, ಚನ್ನಗಿರಿ, ಬಸವಾಪಟ್ಟಣ ಸೇರಿದಂತೆ ಮತ್ತಿತರೆ ನಗರ, ಪಟ್ಟಣ, ಹಳ್ಳಿಗಳಿಂದ ಭಕ್ತರು ಇಲ್ಲಿನ ದರ್ಗಾಕ್ಕೆ ಭೇಟಿ ನೀಡಿದರು.

ದರ್ಗಾ ಆವರಣದಲ್ಲಿ ರಾತ್ರಿ ಹಮ್ಮಿಕೊಂಡಿದ್ದ ಪ್ರಸಿದ್ಧ ಖವ್ವಾಲಿ ಕಾರ್ಯಕ್ರಮದಲ್ಲಿ ದೆಹಲಿಯ ಚಾಂದ್ ಖಾದ್ರಿ ಮತ್ತು ಮುಂಬೈನ ಅಜೀಮ್ ನಾಜಾ ಅವರು ಪೈಪೋಟಿ ಮೇಲೆ ಹೇಳಿದ ಖವ್ವಾಲಿ ಹಾಡುಗಳು ಎಲ್ಲರ ಗಮನ ಸೆಳೆದವು. ಉರುಸು ಅಂಗವಾಗಿ ದರ್ಗಾವನ್ನು ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು.

ಕೊರೊನಾ ಹಿನ್ನೆಲೆಯಲ್ಲಿ ಪುರಸಭೆ ಮತ್ತು ಪೊಲೀಸ್ ಇಲಾಖೆಯವರು ಅಗತ್ಯ ಮುಂಜಾಗ್ರತೆ ಕ್ರಮಗಳನ್ನು ಕೈಗೊಂಡಿದ್ದರು. ಮಾಸ್ಕ್, ಸ್ಯಾನಿಟೈಜ್ ಬಳಸುವಂತೆ ಮತ್ತು ಸಾಮಾಜಿಕ ಅಂತರ ಕಾಯ್ದುಕೊಳ್ಳುವಂತೆ ಪ್ರಚಾರ ಮಾಡುತ್ತಿದ್ದರು. ಸಿಪಿಐ ಸತೀಶ್, ಪಿಎಸ್‌ಐ ವೀರಬಸಪ್ಪ ಕುಸಲಾಪುರ, ಗ್ರಾಮಾಂತರ ಪಿಎಸ್‌ಐ ರವಿಕುಮಾರ್ ಅವರ ನೇತೃತ್ವದಲ್ಲಿ ಬಿಗಿ ಬಂದೋಬಸ್ತ್ ಕೈಗೊಳ್ಳಲಾಗಿತ್ತು.

ಹನಗವಾಡಿಯಲ್ಲಿ ಇಂದು-ನಾಳೆ

## ಅಂತರರಾಷ್ಟ್ರೀಯ ಕಾರ್ಯಾಗಾರ

ಕರ್ನಾಟಕ ರಾಜ್ಯ ಸರ್ಕಾರಿ ಕಾಲೇಜುಗಳ ಎಸ್ಸಿ, ಎಸ್ಟಿ ಶಿಕ್ಷಕರ ಅಸೋಸಿಯೇಷನ್ ಬೆಂಗಳೂರು, ಕರ್ನಾಟಕ ರಾಜ್ಯ ಎಸ್ಸಿ, ಎಸ್ಟಿ ಅಧ್ಯಾಪಕರ ಫೋರಂ, ಕರ್ನಾಟಕ ಪ್ರಥಮ ದರ್ಜೆ ಕಾಲೇಜುಗಳ ಅಧ್ಯಾಪಕರ ಕಲ್ಯಾಣ ಅಸೋಸಿಯೇಷನ್ ಬೆಂಗಳೂರು ಹಾಗೂ ಕಾಲೇಜು ಶಿಕ್ಷಣ ಎಸ್ಸಿ, ಎಸ್ಟಿ ಅಧ್ಯಾ ಪಕರು ಹಾಗೂ ಅಧ್ಯಾಪಕೇತರರ ಅಸೋಸಿಯೇಷನ್ ಮೈಸೂರು ವಿಭಾಗ ಇವರ ಆಶ್ರಯದಲ್ಲಿ ಇಂದು ಮತ್ತು ನಾಳೆ (ಮಾ. 26, 27) ಎರಡು ದಿನಗಳ ಕಾಲ ಅಂತರರಾಷ್ಟ್ರೀಯ ಕಾರ್ಯಾಗಾರ, ಹರಿಹರ ತಾಲ್ಲೂಕು ಹನಗವಾಡಿ ಬಳಿ ಇರುವ ಬಿ. ಕೃಷ್ಣಪ್ಪ ಮೆಮೋರಿಯಲ್ ಮೈತ್ರಿ ಧಾಮದಲ್ಲಿ ನಡೆಯಲಿದೆ.

'ಸಾಮಾಜಿಕ ಬದಲಾವಣೆಯಲ್ಲಿ ಪ. ಜಾತಿ, ಪ. ಪಂಗಡಗಳ ಅಧ್ಯಾಪಕರ ಪಾತ್ರ ಮತ್ತು ಜ್ಞಾನ ಸಮಾಜ ನಿರ್ಮಾಣ' ಕುರಿತು ಕಾರ್ಯಾಗಾರ ಏರ್ಪಡಿಸಲಾಗಿದೆ.

ಕನ್ನಡ ಪ್ರಾಧ್ಯಾಪಕ ಡಾ. ಎ.ಬಿ. ರಾಮಚಂದ್ರಪ್ಪ ಕಾರ್ಯಾಗಾರ ಉದ್ಘಾಟಿಸುವರು. ಡಾ. ವೈ. ರಮೇಶ್ ಅಧ್ಯಕ್ಷತೆ ವಹಿಸಲಿದ್ದಾರೆ.

ಅತಿಥಿಗಳಾಗಿ ಡಾ. ವಿಶ್ವನಾಥ್, ಡಾ. ಎಂ.ಎಸ್. ಅನಿತಾ, ಡಾ. ರಾಜು ಗುಂಡಾಪುರ, ಡಾ. ಜಿ. ಶ್ರೀನಾಥರಾಜ್, ಡಾ. ಕಮಲಮ್ಮ, ಡಾ. ಆದಿನಾರಾಯಣ, ಡಾ. ವಿನುತಾ ಆನಂದ, ಡಾ. ಪುಟ್ಟರಾಜು, ಡಾ. ಬಿ.ಐ. ರಾಜು ಮತ್ತಿತರರು ಭಾಗವಹಿಸಲಿದ್ದಾರೆ.

ಮಧ್ಯಾಹ್ನ 12 ಗಂಟೆಗೆ ಮೊದಲನೆ, ಮಧ್ಯಾಹ್ನ 2.15 ಕ್ಕೆ ಎರಡನೆ, ಸಂಜೆ 4 ಕ್ಕೆ 3ನೇ ಗೋಷ್ಠಿ ನಡೆಯಲಿದ. 6.30 ಕ್ಕೆ ಚರ್ಚೆ ನಂತರ ರಾತ್ರಿ 8 ಗಂಟೆಗೆ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ.

# 'ದಾವಣಗೆರೆ ಆನ್ ಮ್ಯಾಪ್' ಲೋಕಾರ್ಪಣೆ

(1ನೇ ಪುಟದಿಂದ) ಅಭಿವೃದ್ಧಿ ಪಡಿಸಿರುವ ಈ ಆ್ಯಪ್‌ಗೆ ಜಿಲ್ಲಾಡಳಿತ ಕಚೇರಿಯಲ್ಲಿ ಗುರುವಾರ ಅಧಿಕೃತವಾಗಿ ಚಾಲನೆ ನೀಡಿ, ಪತ್ರಿಕಾಗೋಷ್ಠಿಯಲ್ಲಿ ಈ ಬಗ್ಗೆ ಅವರು ಮಾಹಿತಿ ನೀಡಿದರು.

ಡಿಸ್ಟ್ರಿಕ್ಟ್ ಗವರ್ನೆನ್ಸ್ ಮೊಬೈಲ್ ಚಾಲೆಂಜ್ ಅಡಿಯಲ್ಲಿ ದೇಶದ ಎಲ್ಲಾ ಜಿಲ್ಲೆಗಳ ಎನ್‌ಐಸಿ ಅಧಿಕಾರಿಗಳು ಆಪ್ ಅಭಿವೃದ್ಧಿ ಪಡಿಸುವ ಸ್ಪರ್ಧೆಯಲ್ಲಿ ಭಾಗವಹಿಸಿದ್ದು, ಇದರ ಅಂಗವಾಗಿ ಕೇವಲ 15 ರಿಂದ 20 ದಿನಗಳಲ್ಲಿ ನಮ್ಮ ಅಧಿಕಾರಿಗಳು ರಾಜ್ಯದಲ್ಲಿಯೇ ಪ್ರಥಮವಾಗಿ ಆ್ಯಪ್ ಅಭಿವೃದ್ಧಿಪಡಿಸಿದ್ದಾರೆ ಎಂದರು.

**ಆರು ಸೇವೆಗಳ ಮಾಹಿತಿ ಅಳವಡಿಕೆ:** ಆಸ್ಪತ್ರೆಗಳು, ಜನೌಷಧ ಕೇಂದ್ರಗಳು, ಪೊಲೀಸ್ ಸ್ಟೇಷನ್‌ಗಳು, ಪೆಟ್ರೋಲ್ ಬಂಕ್‌ಗಳು, ಗ್ರಾಮ ಒನ್ ಕೇಂದ್ರಗಳು ಮತ್ತು ಯಾತ್ರಾ ಸ್ಥಳಗಳು ಸೇರಿ ಜಿಲ್ಲೆಯ ಆರು ಪ್ರಮುಖ ಮಾಹಿತಿಗಳನ್ನು ಆ್ಯಪ್‌ನಲ್ಲಿ ಅಳವಡಿಸಲಾಗಿದೆ ಎಂದರು.

ಜಿಲ್ಲೆಯ ವೆಬ್‌ಸೈಟ್ ಸಹ ಇದರಲ್ಲಿಯೇ ವೀಕ್ಷಿಸಲು ಅವಕಾಶ ಕಲ್ಪಿಸಲಾಗಿದೆ. ಮುಂದಿನ ದಿನಗಳಲ್ಲಿ ಶಾಲೆಗಳು, ರೈತ ಸಂಪರ್ಕ ಕೇಂದ್ರಗಳು, ವೆಟರ್ನರಿ ಹಾಸ್ಪಿಟಲ್‌ಗಳು ಮತ್ತು ಗ್ರಾಮ ಪಂಚಾಯಿತಿಗಳ ಮಾಹಿತಿಯನ್ನು ಆ್ಯಪ್ ನಲ್ಲಿ ಅಳವಡಿಸಲು ಉದ್ದೇಶಿಸಲಾಗಿದೆ ಎಂದರು.

ಇದೊಂದು ಜನರಿಗೆ ಉಪಯುಕ್ತವಾದ ಸೇವೆಯಾಗಿದೆ ಎಂದು ಎನ್‌ಐಸಿ ಅಧಿಕಾರಿಗಳಾದ ಉದಯಕುಮಾರ್ ಮತ್ತು ರಮೇಶ್ ತಿಳಿಸಿದರು.

### ಆಶ್ರಯ ಮನೆ : ಮೋಸ ಹೋಗದಿರಿ

ಪಳನಿಸ್ವಾಮಿ ಎಂಬುವವರು ಆಶ್ರಯ ಮನೆಗಳನ್ನು ಕೊಡಿಸುವುದಾಗಿ ಜನರ ಬಳಿಹಣಕಾಸು ವ್ಯವಹಾರ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿದ್ದು, ಜನರು ಖಾಸಗಿ ವ್ಯಕ್ತಿಗಳನ್ನು ನಂಬಿ ಹಣ ನೀಡಿ ಮೋಸ ಹೋಗಬಾರದು ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಜಿಲ್ಲಾಡಳಿತ ಅಥವಾ ಯಾವುದೇ ಸಕ್ಷಮ ಪ್ರಾಧಿಕಾರ ಅವರಿಗೆ ಯಾವುದೇ ಅಧಿಕಾರ ನೀಡಿಲ್ಲ ಎಂದು ಸ್ಪಷ್ಟಪಡಿಸಿದ ಅವರು, ಆಶ್ರಯ ನಿವೇಶನಗಳಿಗಾಗಿ ರಾಜೀವಗಾಂಧಿ ವಸತಿ ನಿಗಮಕ್ಕೆ ನಮ್ಮಿಂದ ಪ್ರಸ್ತಾವನೆಗಳನ್ನು ಸಲ್ಲಿಸಲಾಗಿದೆ. ನಿವೇಶನ ಮಂಜೂರಾದ ನಂತರ ಜೇಷ್ಠತೆ ಆದ್ಯತೆ ಮೇರೆಗೆ ನಿವೇಶನ ಹಂಚಿಕೆ ಮಾಡಲಾಗುವುದು. ಅಲ್ಲಿಯವರೆಗೆ ಜನರು ಯಾವುದೇ ಖಾಸಗಿ ವ್ಯಕ್ತಿಗಳನ್ನು ನಂಬಿ ಮೋಸ ಹೋಗಬಾರದು ಎಂದು ಹೇಳಿದರು.


॥ ಶ್ರೀ ಬಸವೇಶ್ವರ ಪ್ರಸನ್ನ ॥ ॥ ಶ್ರೀ ಮೈಲಾರ ಲಿಂಗೇಶ್ವರ ಪ್ರಸನ್ನ ॥

ಹರ ಗಣಾರಾಧನೆ ಆಹ್ವಾನ ಪತ್ರಿಕೆ



ಹರಿಹರ ತಾಲ್ಲೂಕು ಸಂಕ್ಲೀಪುರ ಗ್ರಾಮದ ವಾಸಿ,
ಶ್ರೀಮತಿ ಚಿಂದಿಗೌಡ್ರು ಚಂದ್ರಮ್ಮ ಮತ್ತು ಮಕ್ಕಳು
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 19-03-2021ನೇ ಶುಕ್ರವಾರ ಬೆಳಿಗ್ಗೆ 9-40ಕ್ಕೆ
ನಮ್ಮ ಪೂಜ್ಯ ಪತಿಯವರಾದ

ಶ್ರೀ ಚಿಂದಿಗೌಡ್ರ ನಂಜಪ್ಪ

ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
'ಹರ ಗಣಾರಾಧನೆ'ಯನ್ನು
ದಿನಾಂಕ 27.03.2021ನೇ ಶನಿವಾರ ಬೆಳಿಗ್ಗೆ 10.30 ಕ್ಕೆ
ಹರಿಹರ ತಾಲ್ಲೂಕು, ಸಂಕ್ಲೀಪುರ ಗ್ರಾಮದಲ್ಲಿರುವ ಮೃತರ ಸ್ವಗೃಹದಲ್ಲಿ
ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ,
ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖಿತಪ್ತರು : ಮೃತರ ಧರ್ಮಪತ್ನಿ ಶ್ರೀಮತಿ ಚಂದ್ರಮ್ಮ,
✦ ಶ್ರೀಮತಿ ಲತಾ, ದಿ॥ ರಾಜಪ್ಪ ಮತ್ತು ಮಕ್ಕಳು, ಮಿಟ್ಲಕಟ್ಟೆ
✦ ಶ್ರೀಮತಿ ಪುಷ್ಪಾ, ಶ್ರೀ ಚಿಂದಿಗೌಡ್ರ ಜಗದೀಶ ಮತ್ತು ಮಕ್ಕಳು
✦ ಶ್ರೀಮತಿ ನಂದಿನಿ, ಶ್ರೀ ಚಿಂದಿಗೌಡ್ರ ಬಸವನಗೌಡ ಮತ್ತು ಮಕ್ಕಳು
✦ ಶ್ರೀಮತಿ ಕಾವ್ಯ, ದಿ॥ ಚಿಂದಿಗೌಡ್ರು ವಿಜಯಕುಮಾರ ಮತ್ತು ಮಕ್ಕಳು
✦ ಎಸ್.ಕೆ. ರುದ್ರಪ್ಪ ಚಿಂದಿಗೌಡ್ರು, KEB ಮತ್ತು ಸಹೋದರರು ಹಾಗೂ ಮಕ್ಕಳು
✦ ಕೊಟ್ರಪ್ಪ ಚಿಂದಿಗೌಡ್ರು ಮತ್ತು ಸಹೋದರರು ಹಾಗೂ ಮಕ್ಕಳು
✦ ಸಿ. ನಾಗೇಂದ್ರಪ್ಪ ಚಿಂದಿಗೌಡ್ರು ಮತ್ತು ಸಹೋದರರು ಹಾಗೂ ಮಕ್ಕಳು
✦ ಸಿ.ಎನ್. ಬಸವನಗೌಡ್ರು ಚಿಂದಿಗೌಡ್ರು ಮತ್ತು ಸಹೋದರರು ಹಾಗೂ ಮಕ್ಕಳು
✦ ಜಿ.ಎಂ. ನಾಗನಗೌಡ್ರು ಗುಡದಹಳ್ಳಿ ಮತ್ತು ಸಹೋದರರು ಹಾಗೂ ಮಕ್ಕಳು
✦ ಚಿಂದಿಗೌಡ್ರ ನಿಂಗಪ್ಪ ಮತ್ತು ಸಹೋದರರು ಹಾಗೂ ಮಕ್ಕಳು
✦ ಸಿ.ಆರ್. ಚನ್ನಬಸಪ್ಪ ಚಿಂದಿಗೌಡ್ರು ಮತ್ತು ಸಹೋದರರು ಹಾಗೂ ಮಕ್ಕಳು
✦ ಸಿ.ಎನ್. ಪರಮೇಶ್ವರಪ್ಪ ಚಿಂದಿಗೌಡ್ರು ಮತ್ತು ಸಹೋದರರು ಹಾಗೂ ಮಕ್ಕಳು
✦ ಸಿ.ಎಸ್. ಪರಮೇಶ್ವರಪ್ಪ ಚಿಂದಿಗೌಡ್ರು ಮತ್ತು ಸಹೋದರರು ಹಾಗೂ ಮಕ್ಕಳು
✦ ಗಣೇಶ್ ಬಿ.ಕೆ. ಚಿಂದಿಗೌಡ್ರು ಮತ್ತು ಸಹೋದರರು ಹಾಗೂ ಮಕ್ಕಳು,
ಮಾಲೀಕರು, ಶ್ರೀ ಅನ್ನಪೂರ್ಣೇಶ್ವರಿ ಹೋಟೆಲ್, ಎಂಸಿಸಿ 'ಬಿ' ಬ್ಲಾಕ್, ದಾವಣಗೆರೆ.
ಹಾಗೂ ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಚಿಂದಿಗೌಡ್ರ ವಂಶಸ್ಥರು,
ಸಂಕ್ಲೀಪುರ ಹಾಗೂ ಅಪಾರ ಬಂಧು-ಮಿತ್ರರು. ಮೊ. : 78290 11762

ವಿ.ಸೂ.: ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.


# ನಂದಿಗುಡಿಯಲ್ಲಿ ವಿಜೃಂಭಣೆಯ ರಥೋತ್ಸವ



ಮಲೇಬೆನ್ನೂರು, ಮಾ.25 - ನಂದಿಗುಡಿ ಗ್ರಾಮದ ಆರಾಧ್ಯ ದೈವ ಶ್ರೀ ಬಸವೇಶ್ವರ ದೇವರ ಮಹಾರಥೋತ್ಸವ ಗುರುವಾರ ಮಧ್ಯಾಹ್ನ ಅಪಾರ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಜರುಗಿತು.

ಶ್ರೀ ಸಿದ್ದರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ರಥಕ್ಕೆ ಪೂಜೆ ಸಲ್ಲಿಸಿ ರಥೋತ್ಸವಕ್ಕೆ ಚಾಲನೆ ನೀಡಿದರು. ವಿವಿಧ ಕಲಾ-ಮೇಳಗಳು ರಥೋತ್ಸವಕ್ಕೆ ಮೆರಗು ತಂದವು ಭಕ್ತರು ರಥದ ಚಕ್ರಗಳಿಗೆ ತೆಂಗಿನಕಾಯಿ ಒಡೆದು ಮತ್ತು ರಥದ ಮೇಲೆ ಬಾಳೆ ಹಣ್ಣು ಎಸೆದು ಭಕ್ತಿ ಸಮರ್ಪಿಸಿದರು.

ರಥೋತ್ಸವಕ್ಕೂ ಮುನ್ನ ಶ್ರೀ ಸಿದ್ದರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ಅವರ ಅಡ್ಡ ಪಲ್ಲಕ್ಕಿ ಉತ್ಸವ ಸಂಭ್ರಮದಿಂದ ನೆರವೇರಿತು.

ನಂದಿಗುಡಿ, ಗೋವಿನಹಾಳ್, ಕೆ.ಎನ್. ಹಳ್ಳಿ, ಉಕ್ಕಡಗಾತ್ರಿ, ಪಾಳ್ಯ, ವಾಸನ, ಹಿಂಡಸಘಟ್ಟ, ಜಿಗಳಿ, ಕೊಕ್ಕನೂರು, ಹಳ್ಳಿಹಾಳ್, ಜಿ. ಬೇವಿನಹಳ್ಳಿ , ಬಸಾಪುರ ಗ್ರಾಮಗಳ ಭಕ್ತರು ರಥೋತ್ಸವ ಹಾಗೂ ಅಡ್ಡ ಪಲ್ಲಕ್ಕಿ ಉತ್ಸವದಲ್ಲಿ ಭಾಗವಹಿಸಿದ್ದರು.

ಸಂಜೆ ದೊಡ್ಡ ಬಂಡಿ ಪ್ರದರ್ಶನ ನಡೆಯಿತು, ರಾತ್ರಿ ಓಕಳಿ ನಂತರ ಕಂಕಣ ವಿಸರ್ಜನೆ ಮಾಡಲಾಯಿತು. ಶುಕ್ರವಾರ ಬೆಳಿಗ್ಗೆ ಶ್ರೀ ಬಸವೇಶ್ವರ ದೇವರ ಪಾಲಿಕೆ ಉತ್ಸವದೊಂದಿಗೆ ಬುಕ್ಕಿಟ್ಟಿನ ಸೇವೆ ನಡೆಯಲಿದೆ.

## ಅಭ್ಯರ್ಥಿಗಳ ಪರ ಇಂದು ಎಸ್ಸೆಸ್, ಎಸ್ಸೆಸ್ಸೆಂ ಪ್ರಚಾರ

ಮಹಾನಗರ ಪಾಲಿಕೆಯ 20 ಮತ್ತು 22ನೇ ವಾರ್ಡ್‌ಗಳಿಗೆ ಇದೇ ದಿನಾಂಕ 29ರಂದು ನಡೆಯಲಿರುವ ಉಪಚುನಾವಣೆಗೆ ಸ್ಪರ್ಧಿಸಿರುವ ಕಾಂಗ್ರೆಸ್ ಅಭ್ಯರ್ಥಿಗಳ ಪರ ಶಾಸಕರುಗಳಾದ ಡಾ. ಶಾಮನೂರು ಶಿವಶಂಕರಪ್ಪ, ಪಿ.ಟಿ.ಪರಮೇಶ್ವರ ನಾಯ್ಕ್, ಮಾಜಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರುಗಳು ಇಂದು ಪ್ರಚಾರ ಕೈಗೊಳ್ಳುವರು. ಬೆಳಿಗ್ಗೆ 11 ಕ್ಕೆ 20ನೇ ವಾರ್ಡ್‌ನ ಭಾರತ್ ಕಾಲೋನಿಯಲ್ಲಿ ಎಸ್ಸೆಸ್, ಪರಮೇಶ್ವರನಾಯ್ಕ್, ಎಸ್ಸೆಸ್ಸೆಂ, ಕಾಂಗ್ರೆಸ್‌ನ ಡಿ. ಬಸವರಾಜ್, ಎ.ನಾಗರಾಜ್, ಅಯೂಬ್ ಪೈಲ್ವಾನ್, ಎಸ್. ಮಲ್ಲಿಕಾರ್ಜುನ್ ಅವರೊಂದಿಗೆ ಪ್ರಚಾರ ಕೈಗೊಳ್ಳುವರು.

ಇಂದು ಸಂಜೆ 5 ಕ್ಕೆ ನಗರದ 22ನೇ ವಾರ್ಡ್‌ನ ಯಲ್ಲಮ್ಮ ನಗರದಲ್ಲಿ ಎಸ್ಸೆಸ್, ಎಸ್ಸೆಸ್ಸೆಂ ಅವರು ಕಾಂಗ್ರೆಸ್‌ನ ಶಿವನಳ್ಳಿ ರಮೇಶ್, ಹೆಚ್.ಬಿ.ಮಂಜಪ್ಪ, ಡಿ.ಬಸವರಾಜ್, ಎ. ನಾಗರಾಜ್ ಮತ್ತಿತರರು ಪ್ರಚಾರದಲ್ಲಿ ಭಾಗವಹಿಸಲಿದ್ದಾರೆ.

## ಮಾಧುರಿ ಅವರಿಗೆ ಪಿಎಚ್‌ಡಿ



ದಾವಣಗೆರೆ, ಮಾ.25 - ಬೆಂಗಳೂರಿನ ಖಾಸಗಿ ಕಂಪನಿಯಲ್ಲಿ (ಫೈನಾನ್ಸಿಯಲ್ ಅಡ್ವೈಸರ್) ಸೇವೆ ಸಲ್ಲಿಸುತ್ತಿರುವ ಮಾಧುರಿ ಎಸ್. ಅವರಿಗೆ ದಾವಣಗೆರೆ ವಿಶ್ವವಿದ್ಯಾಲಯದ ವಾಣಿಜ್ಯ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಐ.ಬಿ.ಸೀರಪ್ಪ ಮಾರ್ಗದರ್ಶನದಲ್ಲಿ 'ಎ ಸ್ಟಡಿ ಆನ್ ಎಕ್ಸ್‌ಚೇಂಜ್ ಟ್ರೇಡೆಡ್ ಫಂಡ್ಸ್ ವಿತ್ ಸ್ಪೆಷಲ್ ರೆಫರೆನ್ಸ್ ಟು ಸೆಲೆಕ್ಟೆಡ್ ಕಂಪನೀಸ್ ಇನ್ ಕರ್ನಾಟಕ ಎಂಬ ಮಹಾಪ್ರಬಂಧ ಮಂಡಿಸಿದ್ದರು.

### ಹಾಲೇಕಲ್ಲು ಶಾಂತಮ್ಮ ನಿಧನ



ಜಗಳೂರು ತಾಲ್ಲೂಕು ಹಾಲೇಕಲ್ಲು ಗ್ರಾಮದ ವಾಸಿ ನಿವೃತ್ತ ಶಿಕ್ಷಕರಾದ ದಿ. ಹೆಚ್ ಶರಣಪ್ಪನವರ ಧರ್ಮಪತ್ನಿ ಶಾಂತಮ್ಮ (77) ಇವರು ದಿನಾಂಕ 25.03.2021 ರ ಗುರುವಾರ ರಾತ್ರಿ 8.25ಕ್ಕೆ ನಿಧನರಾದರು. ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 26.03.2021 ರ ಶುಕ್ರವಾರ ಮಧ್ಯಾಹ್ನ 1 ಗಂಟೆಗೆ ಜಗಳೂರು ತಾಲ್ಲೂಕು ಹಾಲೇಕಲ್ಲು ಗ್ರಾಮದ ಮೃತರ ಸ್ವಂತ ಜಮೀನಿನಲ್ಲಿ ನೆರವೇರಲಿದೆ.

# ಜಿಲ್ಲೆಯ ಹಿರಿಯ ಕಬಡ್ಡಿ ಕ್ರೀಡಾಪಟು ರಾಮಣ್ಣ ನಿಧನ



ದಾವಣಗೆರೆ,ಮಾ.25- ಜಿಲ್ಲೆಯ ಹಿರಿಯ ಕಬಡ್ಡಿ ಕ್ರೀಡಾಪಟುಗಳೂ, ಪ್ರಥಮ ದರ್ಜೆ ಗುತ್ತಿಗೆದಾರರೂ, ಮಹಾನಗರ ಪಾಲಿಕೆ ಗುತ್ತಿಗೆದಾರರ ಸಂಘದ ಮಾಜಿ ಅಧ್ಯಕ್ಷರೂ ಆದ ಎ.ಎಂ. ರಾಮಣ್ಣ ಅವರು ಇಂದು ಮುಂಜಾನೆ 6.30ಕ್ಕೆ ನಿಧನರಾದರು.

ಮೃತರಿಗೆ ಸುಮಾರು 58 ವರ್ಷ ವಯಸ್ಸಾಗಿತ್ತು. ಕೆಲ ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಬಾಪೂಜಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ಇಂದು ಸಂಜೆ ಸ್ಥಳೀಯ ರುದ್ರಭೂಮಿಯಲ್ಲಿ ನಡೆಯಿತು.

ಸರಳ ವ್ಯಕ್ತಿತ್ವ ಹೊಂದಿದ್ದ ರಾಮಣ್ಣ, ಜಿಲ್ಲಾ ಅಮೆಚೂರ್ ಕಬಡ್ಡಿ ಸಂಸ್ಥೆಯ ಖಜಾಂಚಿಯಾಗಿದ್ದರು. ನಗರದ ಬ್ಲಾಕ್ ಕಾಂಗ್ರೆಸ್ ಖಜಾಂಚಿಯಾಗಿ ಕಾರ್ಯನಿರ್ವಹಿಸಿದ್ದ ಅವರು, ಕೊಂಡಜ್ಜಿ ರಸ್ತೆಯ ವಿಜಯನಗರದ ಶ್ರೀ ರೇವಣಸಿದ್ದೇಶ್ವರ ದೇವಸ್ಥಾನ ಸಮಿತಿ ಸೇರಿದಂತೆ, ವಿವಿಧ ಸಂಘ-ಸಂಸ್ಥೆಗಳಲ್ಲಿ ಸಕ್ರಿಯ ಪದಾಧಿಕಾರಿಯಾಗಿ ಸಮಾಜ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು.

ರಾಮಣ್ಣ ಅವರ ನಿಧನಕ್ಕೆ ಶಾಸಕ ಡಾ. ಶಾಮನೂರು ಶಿವಶಂಕರಪ್ಪ, ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್, ಕಾಂಗ್ರೆಸ್ ಮುಖಂಡ ಶಿವನಳ್ಳಿ ರಮೇಶ್, ನಗರ ಪಾಲಿಕೆ ಸದಸ್ಯರುಗಳಾದ ಎ.ನಾಗರಾಜ್, ಕೆ. ಚಮನ್ ಸಾಬ್, ಎ.ಬಿ. ರಹೀಂ, ಕಬೀರ್ ಖಾನ್, ಕೆಪಿಸಿಸಿ ವಕ್ತಾರ ಡಿ. ಬಸವರಾಜ್, ಪಂಚಮಸಾಲಿ ಸಮಾಜದ ಮುಖಂಡ ಎಂ. ದೊಡ್ಡಪ್ಪ, ಜಿಲ್ಲಾ ಅಮೆಚೂರ್ ಕಬಡ್ಡಿ ಸಂಸ್ಥೆ ಅಧ್ಯಕ್ಷ ಎಂ. ನಾಗರಾಜ್, ಪ್ರಧಾನ ಕಾರ್ಯದರ್ಶಿ ಎ. ನಾರಾಯಣ ಸ್ವಾಮಿ, ಕ್ರೀಡಾಪಟುಗಳಾದ ಸಚ್ಚಿದಾನಂದಸ್ವಾಮಿ, ಹೆಚ್. ಚಂದ್ರಪ್ಪ, ಶ್ರೀಶೈಲ, ನಿಟುವಳ್ಳಿ ರಾಜು, ಶಿವಕುಮಾರ್, ರಮೇಶ್, ಹೆಚ್. ವೆಂಕಟೇಶ್, ಶ್ರೀನಿವಾಸ್, ಸಂಜು, ಜಯವಿಭವ, ಕಬಡ್ಡಿ ಸುರೇಶ್ ಮತ್ತಿತರರು ಸಂತಾಪ ವ್ಯಕ್ತಪಡಿಸಿದ್ದಾರೆ.

## ಪುರುಷರಿಂದ, ಪುರುಷರಿಗಾಗಿ ಸಮಾಜದ ಸ್ವರೂಪ : ಸುಪ್ರೀಂ

ನವದೆಹಲಿ, ಮಾ. 25 - ಸಮಾಜದ ಸ್ವರೂಪವನ್ನು ಪುರುಷರಿಂದ ಮತ್ತು ಪುರುಷರಿಗಾಗಿ ಸೃಷ್ಟಿಸಲಾಗಿದೆ ಎಂದು ಹೇಳಿರುವ ಸರ್ವೋಚ್ಛ ನ್ಯಾಯಾಲಯ ಸಮಾನ ಸಮಾಜಕ್ಕಾಗಿ ಮರು ನಿರ್ಮಾಣದ ಅಗತ್ಯವಿದೆ ಎಂದು ಹೇಳಿದೆ.

ಸೈನಿಕ ಪಡೆಗಳಲ್ಲಿ ಮಹಿಳಾ ಅಧಿಕಾರಿಗಳ ಸೇರ್ಪಡೆಗೆ ಸಂಬಂಧಿಸಿದಂತೆ ತೆಗೆದುಕೊಂಡಿರುವ ಕ್ರಮಗಳು ಅಸಮರ್ಪಕವಾಗಿವೆ ಎಂದು ದಾಖಲಾಗಿದ್ದ ಅರ್ಜಿಯ ವಿಚಾರಣೆ ವೇಳೆ ಈ ಟಿಪ್ಪಣಿ ಮಾಡಿರುವ ನ್ಯಾಯಾಲಯ, ತೋರಿಕೆಗಾಗಿ ಸಮಾನತೆ ಇದ್ದರೆ ಸಾಲದು.

ಸಂವಿಧಾನದ ನೈಜ ಸ್ಫೂರ್ತಿಯಿಂದ ಸಮಾನತೆ ಇರಬೇಕು ಎಂದು ಸರ್ವೋಚ್ಛ ನ್ಯಾಯಾಲಯ ಹೇಳಿದೆ.

## ಕೋಟೆ ಮಲ್ಲೂರು ವೀರಭದ್ರೇಶ್ವರ ರಥೋತ್ಸವ



**ಹೊನ್ನಾಳಿ**

ಹೊನ್ನಾಳಿ, ಮಾ.25- ತಾಲ್ಲೂಕಿನ ಕೋಟೆಮಲ್ಲೂರು ಗ್ರಾಮದ ಶ್ರೀ ವೀರಭದ್ರೇಶ್ವರ ಸ್ವಾಮಿ ಕೆಂಡದಾರ್ಚನೆ, ಮಹಾರಥೋತ್ಸವ ನಡೆಯಿತು.


ಭಕ್ತರು ರಥಕ್ಕೆ ಮಂಡಕ್ಕಿ, ಬಾಳೆಹಣ್ಣು, ಮೆಣಸಿನಕಾಳು, ಉತ್ತತ್ತಿ ಎಸೆಯುವುದರ ಮೂಲಕ ತಮ್ಮ ಭಕ್ತಿ ಸಮರ್ಪಿಸಿದರು. ತಾಲ್ಲೂಕಿನ ಅರಕೆರೆ ಗ್ರಾಮದ ಹೊನ್ನೆತ್ತಮ್ಮ, ಕೋಟೆ ಮಲ್ಲೂರಿನ ದುರ್ಗಾಮಾತೆ, ಬೀರಲಿಂಗೇಶ್ವರ ಸ್ವಾಮಿ, ಆಂಜನೇಯ ಸ್ವಾಮಿ, ಬಳೆಲಿಂಗೇಶ್ವರ ಸ್ವಾಮಿ ಹಾಗೂ ವೀರಭದ್ರೇಶ್ವರ ಸ್ವಾಮಿ ಪಲ್ಲಕ್ಕಿ ಮೆರವಣಿಗೆ ಅದ್ಧೂರಿಯಾಗಿ ನಡೆಯಿತು.

ಬಸವರಾಜಯ್ಯ, ಕರೆಮಣ್ಣಾರ ಸಿದ್ದಪ್ಪ, ಮೈಲಪ್ಪರ ಭದ್ರಪ್ಪ ಮತ್ತು ಮಕ್ಕಳಿಂದ ಪ್ರಸಾದ ವ್ಯವಸ್ಥೆ ಏರ್ಪಡಿಸಲಾಗಿತ್ತು. ಮಹೇಶ್ವರಪ್ಪ, ಶಾಂತ ವೀರಪ್ಪ, ರುದ್ರಮ್ಮ, ಬಿ.ಸಿ. ರಾಜಪ್ಪ ಗೌಡ್ರು, ಪರಮೇಶ್ವರಪ್ಪ ಗೌಡ್ರು, ನಿಂಗಪ್ಪ, ಬಸಪ್ಪ, ಅಣ್ಣಪ್ಪ, ಹನುಮಂತಪ್ಪ, ಕಮಲಮ್ಮ ಹಾಲೇಶಪ್ಪ, ಗೀತಾ ಮಹೇಶ್ವರಪ್ಪ ಇನ್ನಿತರರಿದ್ದರು.

## ಜಗಜೀವನರಾಂ, ಅಂಬೇಡ್ಕರ್ ಪ್ರಶಸ್ತಿಗಳಿಗೆ ಅರ್ಜಿ

ದಾವಣಗೆರೆ, ಮಾ.25- ಡಾ.ಬಾಬು ಜಗಜೀವನರಾಂ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಪ್ರಯುಕ್ತ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಶ್ರೇಯೋಭಿವೃದ್ಧಿಗೆ ಶ್ರಮಿಸಿದ ಅರ್ಹ ವ್ಯಕ್ತಿಗಳಿಗೆ ಪ್ರಶಸ್ತಿ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರ ಕಚೇರಿ, ದಾವಣಗೆರೆ (ರೂಂ ನಂ:37, ಜಿಲ್ಲಾಡಳಿತ ಭವನ) ಇಲ್ಲಿ ಅರ್ಜಿ ಪಡೆದು ಮಾ. 30ರೊಳಗೆ ಸಲ್ಲಿಸಬಹುದೆಂದು ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕಿ ರೇಷ್ಮಾ ಕೌಸರ್ ತಿಳಿಸಿದ್ದಾರೆ.

## ಕೂಲಹಳ್ಳಿಯ ಐತಿಹಾಸಿಕ ಶ್ರೀ ಗೋಣಿಬಸವೇಶ್ವರ ಸ್ವಾಮಿ ರಥೋತ್ಸವ



ಹರಪನಹಳ್ಳಿ, ಮಾ.25- ಪಂಚಗಣಾಧಿಶ್ವರರಲ್ಲಿ ಒಬ್ಬರಾದ ತಾಲ್ಲೂಕಿನ ಐತಿಹಾಸಿಕ ಕೂಲಹಳ್ಳಿಯ ಶ್ರೀ ಗೋಣಿ ಬಸವೇಶ್ವರಸ್ವಾಮಿ ರಥೋತ್ಸವ ಸಡಗರ ಸಂಭ್ರಮದಿಂದ ಜರುಗಿತು.

ಭಕ್ತರ ಇಷ್ಟಾರ್ಥವನ್ನು ನೆರವೇರಿಸುವ ಕ್ಷೇತ್ರದ ಗೋಣಿ ಬಸವೇಶ್ವರ ರಥೋತ್ಸವಕ್ಕೆ ಕೊರೊನಾ ಸೇರಿದಂತೆ ಸರ್ಕಾರದ ಯಾವುದೇ ನಿಯಮಗಳನ್ನು ಲೆಕ್ಕಿಸದೆ ಜನಸಾಗರವೇ ಸೇರಿತ್ತು.

ಜಾತ್ರೆಯಲ್ಲಿ ಕೆಲವೇ ಅಂಗಡಿಗಳ ಟೆಂಟ್ ಹಾಕಲಾಗಿತ್ತು. ಎಲ್ಲೆಡೆ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು. ದೂರದಿಂದ ಬಂದ ಭಕ್ತರಿಗೆ ಜಾತ್ರೆಯಲ್ಲಿ ಉಳಿದುಕೊಳ್ಳಲು ಅವಕಾಶವಿಲ್ಲದ್ದರಿಂದ ದೇವರ ದರ್ಶನ ಪಡೆದು ತಮ್ಮ ಊರುಗಳಿಗೆ ವಾಪಸ್ ಹೋಗುತ್ತಿದ್ದರು. ಜಾತ್ರೆಗೆ ಬಂದ ಭಕ್ತರಲ್ಲಿ ಬೆರಳೆಣಿಕೆಯಷ್ಟು ಜನರು ಮಾತ್ರ ಮಾಸ್ಕ್ ಧರಿಸಿದ್ದರು. ರಥೋತ್ಸವಕ್ಕೆ ಉತ್ಸವ ಮೂರ್ತಿ ಜೊತೆಗೆ ಪಟ್ಟದ ಶ್ರೀ ಚಿನ್ಮಯ ಸ್ವಾಮೀಜಿ, ಅಲಂಕರಿಸಿದ ಅಶ್ವದೊಂದಿಗೆ ರಥದ ಬಳಿ ಆಗಮಿಸಿ, ರಥವನ್ನು ಐದು ಸುತ್ತು ಪ್ರದಕ್ಷಿಣೆ ಮಾಡಿದ ನಂತರ ಕೊಟ್ಟೂರಿನ ಗುರುಬಸವೇಶ್ವರ ಮೂರ್ತಿಯನ್ನು ರಥದಲ್ಲಿ ಪ್ರತಿಷ್ಠಾಪಿಸಿದ ನಂತರ ಗೋಣಿ ಬಸವೇಶ್ವರ ರಥೋತ್ಸವ ಜರುಗಿತು.

ಈ ವೇಳೆ ನೀಲಗುಂದ ಜಿಲ್ಲಾ ಪಂಚಾಯ್ತಿ ಸದಸ್ಯ ಹೆಚ್.ಬಿ. ಪರುಶುರಾಮಪ್ಪ, ಬಾಗಳಿ ಗ್ರಾಮ ಪಂಚಾಯ್ತಿ ಅಧ್ಯಕ್ಷ ಪೂಜಾರ್ ಹನುಮಂತಪ್ಪ, ಸಿಪಿಐ ನಾಗರಾಜ್ ಕಮ್ಮಾರ, ಪಿಎಸ್ಐ ಪ್ರಕಾಶ್ ಇನ್ನಿತರರಿದ್ದರು.

## ಯಕ್ಕನಹಳ್ಳಿಯಲ್ಲಿ ಬಸವೇಶ್ವರ ತೇರು



ಹೊನ್ನಾಳಿ, ಮಾ.25 - ತಾಲ್ಲೂಕಿನ ಯಕ್ಕನಹಳ್ಳಿ ಗ್ರಾಮದ ಶ್ರೀ ಬಸವೇಶ್ವರ ದೇವರ ರಥೋತ್ಸವ ಇಂದು ಬೆಳಗಿನಜಾವ ನಡೆಯಿತು. ರಥೋತ್ಸವದ ಸಂದರ್ಭದಲ್ಲಿ ಭಕ್ತರು ಮಂಡಕ್ಕಿ, ಮೆಣಸಿನಕಾಳು, ಬಾಳೆಹಣ್ಣು ಎರಚುವ ಹಾಗೂ ಒಣ ಕೊಬ್ಬರಿ ಸುಡುವ ಮೂಲಕ ಭಕ್ತಿ ಸಮರ್ಪಿಸಿದರು.

ಸಂಜೆ ಗ್ರಾಮದ ರೈತರು ತಮ್ಮ ಎತ್ತುಗಳನ್ನು ಶೃಂಗರಿಸಿ ಮೆರವಣಿಗೆ ನಡೆಸಿದರು. ರಾತ್ರಿ 7ಕ್ಕೆ ಶ್ರೀ ಬಸವೇಶ್ವರ ದೇವರ ಅಡ್ಡಪಲ್ಲಕ್ಕಿ ಉತ್ಸವ ವಿವಿಧ ವಾದ್ಯಮೇಳಗಳೊಂದಿಗೆ ರಾಜ ಬೀದಿಗಳಲ್ಲಿ ನಡೆಯಿತು

## ಮೈಲಾರ ಜಾತ್ರೆ ಹುಂಡಿಯಲ್ಲಿ 27 ಲಕ್ಷ ರೂ. ಕುರುವತ್ತಿ - 9 ಲಕ್ಷ ಭಕ್ತಾದಾಯ



ಹೂವಿನಹಡಗಲಿ, ಮಾ.25- ತಾಲ್ಲೂಕಿನ ಸುಪ್ರಸಿದ್ಧ ಶ್ರೀ ಮೈಲಾರಲಿಂಗೇಶ್ವರ ಸ್ವಾಮಿ ದೇವಸ್ಥಾನದ ಜಾತ್ರೆ ಹಾಗೂ ಕಾರಣಿಕದ ನಂತರ ತೆರೆಯಲಾದ ಹುಂಡಿಗಳ ಎಣಿಕೆಯಲ್ಲಿ ರೂ. 27,23,560 ಸಂಗ್ರಹವಾಗಿದೆ.

ಕುರುವತ್ತಿ ದೇವಸ್ಥಾನದ ಹುಂಡಿಯನ್ನು ತೆರೆದು ಎಣಿಕೆ ಮಾಡಲಾಗಿ 9,50,000 ಭಕ್ತಾದಾಯ ಬಂದಿದೆ. ಆದರೆ ಎರಡೂ ದೇವಸ್ಥಾನಗಳ ಹುಂಡಿಗಳಲ್ಲಿ ಬಂಗಾರ ಮತ್ತು ಬೆಳ್ಳಿಯ ಆಭರಣಗಳನ್ನು ಈ ಸಾರಿ ಭಕ್ತರು ಕಾಣಿಕೆ ರೂಪದಲ್ಲಿ ಹಾಕಿಲ್ಲ ಎಂದು ದೇವಸ್ಥಾನದ ಕಾರ್ಯ ನಿರ್ವಹಣಾಧಿಕಾರಿ ಹೆಚ್. ಗಂಗಾಧರಪ್ಪ ತಿಳಿಸಿದ್ದಾರೆ.

ಸದರಿ ಹಣವನ್ನು ಸಂಬಂಧಿಸಿದ ಅಧಿಕಾರಿಗಳು, ಜನಪ್ರತಿನಿಧಿಗಳ ಸಮಕ್ಷಮದಲ್ಲಿ ಎಣಿಕೆ ಮಾಡಲಾಗಿದೆ.

## ಶ್ಯಾಗಲೆಯಲ್ಲಿ ಜನಪ್ರತಿನಿಧಿಗಳಿಗೆ ಸನ್ಮಾನ

ದಾವಣಗೆರೆ, ಮಾ.25- ತಾಲ್ಲೂಕಿನ ಶ್ಯಾಗಲೆ ಗ್ರಾಮದಲ್ಲಿ ಶ್ರೀ ಮಲ್ಲಿಕಾರ್ಜುನ ಸ್ವಾಮಿ ರಥೋತ್ಸವದ ಪ್ರಯುಕ್ತ ಇಪ್ಟಾ ವತಿಯಿಂದ ಕನ್ನಡ ಉಳಿಸಿ-ಬೆಳೆಸಿ ವಿಶೇಷ ಉಪನ್ಯಾಸ, ಗೀತ ಗಾಯನ ಹಾಗೂ ನೂತನವಾಗಿ ಆಯ್ಕೆಗೊಂಡಿರುವ ಶ್ಯಾಗಲೆ ಗ್ರಾಮ ಪಂಚಾಯ್ತಿ ಜನಪ್ರತಿನಿಧಿಗಳಿಗೆ ಸನ್ಮಾನ ಸಮಾರಂಭ ಹಮ್ಮಿಕೊಳ್ಳಲಾಗಿತ್ತು.

ವಿಶೇಷ ಉಪನ್ಯಾಸವನ್ನು ಸಾಹಿತಿ ಎಸ್.ಟಿ. ಗಂಗಾಧರ್ ನೀಡಿ ಕನ್ನಡವನ್ನು ಹೆಚ್ಚು ಹೆಚ್ಚು ಬಳಸುವುದರ ಮೂಲಕ ಕನ್ನಡವನ್ನು ಉಳಿಸುವ ಪ್ರಯತ್ನ ಮಾಡಬೇಕಾಗಿದೆ ಎಂದರು. ನಂತರ ನೂತನ ಗ್ರಾ.ಪಂ. ಸದಸ್ಯರುಗಳಿಗೆ ಸನ್ಮಾನಿಸಲಾಯಿತು. ಜಿ.ಕೆ. ಜಗದೀಶ್ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ರಂಗಭೂಮಿ ಕಲಾವಿದರಾದ ತಿಪ್ಪೇಶಣ್ಣ, ಕೆ.ಜೆ. ಕುಮಾರ್, ಜೆ.ಎಸ್. ಹಾಲೇಶ್, ಕೆ.ವಿ. ಜಯದೇವಯ್ಯ, ಕೆ.ಎನ್. ಮಂಜುನಾಥ, ಶ್ಯಾಗಲೆ ಹಾಲು ಉತ್ಪಾದಕರ ಸಹಕಾರ ಸಂಘದ ಕಾರ್ಯದರ್ಶಿ ಮಹಾರುದ್ರಪ್ಪ ಮತ್ತು ಕಲಾವಿದರಾದ ಬಿ. ಸಿದ್ದಪ್ಪ ಕಾರ್ಯಕ್ರಮಕ್ಕೆ ಮೆರುಗು ನೀಡಿದರು.

ಶ್ಯಾಗಲೆ ಶರಣಪ್ಪ ಸ್ವಾಗತಿಸಿದರು. ಕಲಾವಿದರಾದ ಐರಣಿ ಚಂದ್ರು, ಹೆಗ್ಗರೆ ರಂಗಪ್ಪ, ಬಾನಪ್ಪ ಪ್ರಾರ್ಥಿಸಿ ದರು. ಡಾ. ಕೆ.ಎಂ. ಮಂಜುನಾಥ್ ಮಾತನಾಡಿದರು. ಗುಡ್ಡದಪ್ಪ ವಂದಿಸಿದರು. ಬಿ.ಸಿ. ಸಿದ್ದಪ್ಪ ನಿರೂಪಿಸಿದರು.

## ಮಾಧ್ಯಮಗಳಲ್ಲಿ ಸರಿಗನ್ನಡ ಬಳಕೆ ಅಭಿಯಾನ

ದಾವಣಗೆರೆ, ಮಾ.25- ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕನ್ನಡ ಕಾಯಕ ವರ್ಷ ಕಾರ್ಯಕ್ರಮದಡಿ ಇದೇ ದಿನಾಂಕ 29, 30 ಹಾಗೂ 31 ರಂದು ಸರಸ್ವತಿ ಕನ್ನಡ ದಿನಪತ್ರಿಕೆ ಸಂಪಾದಕರಾಗಿದ್ದ ದಿ. ಆರ್. ಕಲ್ಯಾಣಮ್ಮನವರ 12 7ನೇ ಜನ್ಮ ದಿನದ ಪ್ರಯುಕ್ತ 'ಮಾಧ್ಯಮಗಳಲ್ಲಿ ಸರಿಗನ್ನಡ ಬಳಕೆ ಅಭಿಯಾನ'ವನ್ನು ಹಮ್ಮಿಕೊಳ್ಳಲು ಉದ್ದೇಶಿದೆ ಎಂದು ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ತಿಳಿಸಿದ್ದಾರೆ.


## ಗ್ರಾ.ಪಂ. ಚುನಾವಣೆ: ಶುಷ್ಕ ದಿನ ಘೋಷಣೆ

ದಾವಣಗೆರೆ, ಮಾ.25- ಅವಧಿ ಪೂರ್ಣಗೊಂಡಿರುವ ಹಾಗೂ ತೆರವಾದ ಗ್ರಾ.ಪಂ.ಸದಸ್ಯರ ಸ್ಥಾನಗಳನ್ನು ತುಂಬಲು ಮಾ.29 ರಂದು ಮತದಾನ ನಡೆಯಲಿರುವ ಗ್ರಾ.ಪಂ. ವ್ಯಾಪ್ತಿಯಲ್ಲಿ ನಾಡಿದ್ದು ದಿನಾಂಕ 27 ರ ಸಂಜೆ 5 ಗಂಟೆಯಿಂದ ದಿನಾಂಕ 29 ರ ಸಂಜೆ 5 ಗಂಟೆವರೆಗೆ ಶುಕ್ಷ ದಿನ ಘೋಷಣೆ ಮಾಡಿ ಜಿಲ್ಲಾಧಿಕಾರಿಗಳು ಆದೇಶಿಸಿರುತ್ತಾರೆ.

ಗ್ರಾಮ ಪಂಚಾಯ್ತಿ ಸಂಖ್ಯೆ 37- ಬೇತೂರು, 40-ಕನಗೊಂಡನಹಳ್ಳಿ, 41-ಕುಕ್ಕುವಾಡ ಹಾಗೂ ಹೊನ್ನಾಳಿ ತಾಲ್ಲೂಕಿಗೆ ಸಂಬಂಧಿಸಿದಂತೆ ಅಭ್ಯರ್ಥಿ ಮರಣದಿಂದ ತೆರವಾದ ಸಂಖ್ಯೆ 7-ಅರಬಗಟ್ಟೆ ಗ್ರಾಮ ಪಂಚಾಯ್ತಿಗಳಲ್ಲಿ ಸದಸ್ಯರ ಸ್ಥಾನ ತುಂಬಲು ದಿನಾಂಕ 29 ರಂದು ಸಂಜೆ 5 ರವರೆಗೆ ಶುಷ್ಕ ದಿನವೆಂದು ಘೋಷಿಸಲಾಗಿದೆ.

ಈ ಅವಧಿಯಲ್ಲಿ ಎಲ್ಲಾ ಮದ್ಯದಂಗಡಿಗಳನ್ನು ಮತ್ತು ಮದ್ಯ ತಯಾರಿಕಾ ಘಟಕಗಳನ್ನು ಅದರ ಮಾಲೀಕರು, ಅಧಿಭೋಗದಾರರು ಮತ್ತು ಸಂದರ್ಭಾನುಸಾರ ವ್ಯವಸ್ಥಾಪಕರು ಮುಚ್ಚತಕ್ಕದ್ದು ಹಾಗೂ ಮೊಹರು ಮಾಡಿ ಅದರ ಕೀಯನ್ನು ಸಂಬಂಧಿಸಿದ ತಾಲ್ಲೂಕಿನ ಕಾರ್ಯ ನಿರ್ವಾಹಕ ಮ್ಯಾಜಿಸ್ಟ್ರೇಟರಿಗೆ ಒಪ್ಪಿಸತಕ್ಕದ್ದು. ನೀತಿ ಸಂಹಿತೆ ಜಾರಿಯಲ್ಲಿರುವ ಅವಧಿಯಲ್ಲಿ ಯಾರಾದರೂ ಮದ್ಯವನ್ನು ಸ್ವಾಧೀನದಲ್ಲಿಟ್ಟುಕೊಂಡಿರುವುದು ಅಥವಾ ಮದ್ಯವನ್ನು ಸೇವಿಸಿ ಬೀದಿಯಲ್ಲಿ ರಂಪಾಟ ಮಾಡುತ್ತಿರುವುದು ಕಂಡು ಬಂದರೆ ಚುನಾವಣೆ ಮುಗಿಯುವವರೆಗೆ ಕಸ್ಟಡಿಯಲ್ಲಿಡಲು ಜಿಲ್ಲಾಧಿಕಾರಿಗಳು ಆದೇಶಿಸಿದ್ದಾರೆ.

## ಕರುಣಾದಿಂದ ಸಾರ್ವಜನಿಕರಿಗೆ ಕುಡಿಯುವ ನೀರಿನ ವ್ಯವಸ್ಥೆ



ದಾವಣಗೆರೆ, ಮಾ. 25- ನಗರಕ್ಕೆ ವ್ಯಾಪಾರ ಮತ್ತು ಆಸ್ಪತ್ರೆಗೆ ಬಂದಂತಹ ಸುತ್ತಮುತ್ತಲಿನ ಗ್ರಾಮಸ್ಥರಿಗೆ ಹಾಗೂ ನಗರ ಜನತೆಗೆ ಬಿಸಿಲಿನ ಬೇಗೆಗೆ ಬಳಲಿ, ನೀರಿನ ದಾಹ ತೀರಿಸಿಕೊಳ್ಳಲು ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲು ನಗರದ ಕರುಣಾ ಜೀವ ಕಲ್ಯಾಣ ಟ್ರಸ್ಟ್ ಮುಂದಾಗಿದೆ.

ಸಾರ್ವಜನಿಕರು ಓಡಾಡುವಂತಹ ಸ್ಥಳಗಳಲ್ಲಿ, ಅಂಗಡಿಗಳಲ್ಲಿ 20 ಲೀ. ವಾಟರ್ ಕ್ಯಾನ್‌ಗಳನ್ನು ಇಡಲು ಟ್ರಸ್ಟ್ ನಿರ್ಧರಿಸಿದ್ದು, ಅಂಗಡಿಗಳ ಮುಂಭಾಗದಲ್ಲಿ ನೀರಿನ ಕ್ಯಾನ್‌ಗಳನ್ನು ಇಟ್ಟು ಕುಡಿಯುವ ನೀರಿನ ವ್ಯವಸ್ಥೆ ಮಾಡಲು ಬಯಸುವವರು ವಾಟರ್ ಕ್ಯಾನ್ ಟ್ರಸ್ಟ್‌ಗೆ ಬಂದು ಕ್ಯಾನ್ ತೆಗೆದುಕೊಳ್ಳಬಹುದು ಇಲ್ಲವಾದಲ್ಲಿ ವಿಳಾಸ ಕೊಟ್ಟರೆ ನಾವೇ ತಾವಿರುವ ಸ್ಥಳಗಳಿಗೆ ತಲುಪಿಸಲಾಗುವುದು ಎಂದು ಟ್ರಸ್ಟ್ ತಿಳಿಸಿದೆ. ಮಾಹಿತಿಗೆ ಲಿಂಗರಾಜು - 95380 24422, ಸದಾನಂದ- 6363151534 ಸಂಪರ್ಕಿಸಬಹುದಾಗಿದೆ.

## ದಾವಣಗೆರೆ ವಿವಿ 8ನೇ ಘಟಿಕೋತ್ಸವ

ದಾವಣಗೆರೆ, ಮಾ 25- ದಾವಣಗೆರೆ ವಿಶ್ವವಿದ್ಯಾನಿಲಯದ ಎಂಟನೇ ವಾರ್ಷಿಕ ಘಟಿಕೋತ್ಸವವನ್ನು ಏಪ್ರಿಲ್ 8 ರ ಗುರುವಾರ ಬೆಳಿಗ್ಗೆ 11 ಗಂಟೆಗೆ ಶಿವಗಂಗೋತ್ರಿಯಲ್ಲಿ ಆಯೋಜಿಸಲಾಗಿದೆ.

ರಾಜ್ಯಪಾಲರು ಹಾಗೂ ವಿಶ್ವ ವಿದ್ಯಾನಿಲಯದ ಕುಲಾಧಿಪತಿಗಳೂ ಆದ ವಜುಭಾಯಿ ರೂಢಾಭಾಯಿ ವಾಲಾ ಇವರು ಘಟಿಕೋತ್ಸವದ ಅಧ್ಯಕ್ಷತೆ ವಹಿಸಲಿದ್ದಾರೆ. ಉಪ ಮುಖ್ಯಮಂತ್ರಿ ಹಾಗೂ ದಾವಣಗೆರೆ ವಿವಿಯ ಸಮ-ಕುಲಾಧಿಪತಿಗಳಾದ ಡಾ.ಸಿ.ಎನ್.ಅಶ್ವತ್ಥ್ ನಾರಾಯಣ ಉಪಸ್ಥಿತರಿರುವರು.

ಬೆಂಗಳೂರಿನ ಅಕಾಡೆಮಿ ಫಾರ್ ಕ್ರಿಯೇಟಿವ್ ಟೀಚಿಂಗ್‌ನ ಅಧ್ಯಕ್ಷರಾದ ಡಾ.ಗುರುರಾಜ್ ಕರಜಗಿ ಘಟಿಕೋತ್ಸವ ಭಾಷಣ ಮಾಡಲಿದ್ದಾರೆ. ಕುಲಪತಿಗಳು, ಕುಲಸಚಿವರು (ಪರೀಕ್ಷಾಂಗ), ಸಿಂಡಿಕೇಟ್ ಮತ್ತು ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು ಪಾಲ್ಗೊಳ್ಳುವರು ಎಂದು ದಾವಣಗೆರೆ ವಿವಿ ಕುಲಪತಿ ಪ್ರೊ.ಎಸ್.ವಿ.ಹಲಸೆ ತಿಳಿಸಿದ್ದಾರೆ.

## ಶಾಲಾ ಗ್ರಂಥಾಲಯಕ್ಕೆ 500 ಪುಸ್ತಕಗಳು

ದಾವಣಗೆರೆ, ಮಾ.25- ಹೊನ್ನಾಳಿ ತಾಲ್ಲೂಕು ಬೆನಕನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮತ್ತು ಗ್ರಾಮ ಪಂಚಾಯ್ತಿ ಗ್ರಂಥಾಲಯಗಳಿಗೆ ರಾಜ್ಯ ಸಾರ್ವಜನಿಕ ಗ್ರಂಥಾಲಯ ಇಲಾಖೆಯಿಂದ ತಲಾ 500 ಪುಸ್ತಕಗಳನ್ನು ಒದಗಿಸಲಾಯಿತು.

ಮಕ್ಕಳ ಹಿತಕ್ಕಾಗಿ ಶ್ರಮಿಸುತ್ತಿರುವ ಪತ್ರಕರ್ತ ಬೆನಕನಹಳ್ಳಿ ಶೇಖರಗೌಡ ಅವರನ್ನು ಮಾಜಿ ಶಾಸಕ ಡಿ.ಜಿ. ಶಾಂತನಗೌಡ, ಹಿರಿಯ ಸಮಾಜ ಸೇವಕ ಪಿ. ವೀರಣ್ಣ, ಹಿರಿಯ ಪ್ರಾಥಮಿಕ ಶಾಲೆ ಮುಖ್ಯ ಶಿಕ್ಷಕ ಕೋಟ್ಯಪ್ಪ, ಗ್ರಾ.ಪಂ. ಗ್ರಂಥಾಲಯ ಸಹಾಯಕ ಪುಷ್ಪ ಪಂಚಾಕ್ಷರಿ ಅಭಿನಂದಿಸಿದರು.

## ಪೃಥ್ವಿ ಅವರಿಗೆ 'ಶ್ರೇಷ್ಠ ಸಾಧಕಿ' ಬಿರುದು



ದಾವಣಗೆರೆ, ಮಾ. 25 - ರಾಯಚೂರು ಜಿಲ್ಲೆಯ ದೇವಸೂಗೂರು ತಾಲ್ಲೂಕಿನಲ್ಲಿ ನಂದಿ ಪ್ರತಿಷ್ಠಾನದ ಆಶ್ರಯದಲ್ಲಿ ಈಚೆಗೆ ನಡೆದ 'ನನ್ನ ದಾರಿ ದೀಪ' ಕಾರ್ಯಕ್ರಮದಲ್ಲಿ ಈ ನಾಡಿನ ಸಮಾಜ ಸೇವೆ ಮತ್ತು ಸಂಗೀತ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಗಾಗಿ ರಾಷ್ಟ್ರಪ್ರಶಸ್ತಿ ಪುರಸ್ಕೃತ ದಾವಣಗೆರೆಯ ಆದಮ್ಯ ಕಲಾ ಸಂಸ್ಥೆಯ ಕು॥ ಪೃಥ್ವಿ ಬಿ.ಎಂ. ಅವರಿಗೆ 'ಶ್ರೇಷ್ಠ ಸಾಧಕಿ' ಬಿರುದು ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಪ್ರಕಾಶ್ ನಂದಿ, ಕರ್ನಾಟಕ ಉಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಾಧೀಶರಾದ ನ್ಯಾಯಮೂರ್ತಿ ಅರಳಿ ನಾಗರಾಜ್ ಮತ್ತು ನಗರದ ಗಣ್ಯರು ಉಪಸ್ಥಿತರಿದ್ದರು.


## ಹೊನ್ನಾಳಿ ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷರಾಗಿ ದೊಡ್ಡೇರಹಳ್ಳಿ ನಾಗೇಂದ್ರಪ್ಪ



ಹೊನ್ನಾಳಿ, ಮಾ.25 - ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷರಾಗಿ ದೊಡ್ಡೇರಹಳ್ಳಿ ಎ. ನಾಗೇಂದ್ರಪ್ಪ ಗುರುವಾರ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ದೊಡ್ಡೇರಹಳ್ಳಿ ಎ. ನಾಗೇಂದ್ರಪ್ಪ ಹೊರತುಪಡಿಸಿ ಬೇರಾರು ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿ, ಜಗಳೂರಿನ ಸಹಕಾರ ಸಂಘಗಳ ಅಭಿವೃದ್ಧಿ ಅಧಿಕಾರಿ ಸಿ. ಗೋಪಾಲ್ ಅವಿರೋಧ ಆಯ್ಕೆಯನ್ನು ಘೋಷಿಸಿದರು.

## ಕೂಡ್ಲಿಗಿಯಲ್ಲಿ ಕ್ಷಯರೋಗ ದಿನಾಚರಣೆ



ಕೂಡ್ಲಿಗಿ, ಮಾ.25- ತಾಲ್ಲೂಕು ಆರೋಗ್ಯ ಇಲಾಖೆ, ಸಾರ್ವಜನಿಕ ಆಸ್ಪತ್ರೆ, ಮೈರಾಡ ಟಿ.ಬಿ. ರೀಚ್ ಸಂಸ್ಥೆ, ಆರೋಹಣ ಸೊಸೈಟಿ ಫಾರ್ ಸೋಷಿಯಲ್ ಡೆವಲಪ್‌ಮೆಂಟ್ ಸಂಸ್ಥೆ, ಸೌಖ್ಯ ಬೆಳಕು ಸಮುದಾಯ ಸೇವಾ ಸಂಸ್ಥೆ, ವಿಮುಕ್ತಿ ಏಡ್ಸ್ ತಡೆಗಟ್ಟುವ ಮಹಿಳಾ ಸಂಘ, ಶ್ರೀ ರಾಘವೇಂದ್ರ ಪ್ಯಾರಾ ಮೆಡಿಕಲ್ ಕಾಲೇಜು ಇವರ ಸಂಯುಕ್ತ ಆಶ್ರಯದಲ್ಲಿ ವಿಶ್ವ ಕ್ಷಯ ರೋಗ ದಿನಾಚರಣೆ ಆಚರಿಸಲಾಯಿತು.

ಉದ್ಘಾಟಕರಾಗಿ ಆಗಮಿಸಿದ್ದ ತಹಶೀಲ್ದಾರ್ ಮಹಾಬಲೇಶ್ವರ್ ಆಗಮಿಸಿ, ಪ್ರತಿಜ್ಞಾ ವಿಧಿ ಬೋಧಿಸಿ ಮಾತನಾಡಿ, ಜಾಥಾಗೆ ಚಾಲನೆ ನೀಡಿದರು.

ತಾಲ್ಲೂಕು ಆರೋಗ್ಯ ಅಧಿಕಾರಿ ಡಾ. ಬಿ. ಷಣ್ಮುಖ ನಾಯ್ಕ, ತಾಲ್ಲೂಕು ಆಸ್ಪತ್ರೆ ಮುಖ್ಯ ವೈದ್ಯಾಧಿಕಾರಿ ಡಾ. ವಿನಯ್ ಮುದೇಗೌಡರು, ಮೂಳೆ ತಜ್ಞ ಡಾ. ರವಿ ಕುಮಾರ್, ಮಕ್ಕಳ ತಜ್ಞರಾದ ಡಾ. ಐಶ್ವರ್ಯ, ಡಾ. ರೇಖಾ, ಫಾರ್ಮಸಿ ಅಧಿಕಾರಿ ಈಶಪ್ಪ, ಶುಶ್ರೂಷಾಧಿಕಾರಿ ರಾಮಾಂಜನಯ್ಯ, ತಂತ್ರಜ್ಞರಾದ ಅಂಗಡಿ ಮಹಾಂತೇಶ, ಗುರು ಬಸವರಾಜ, ತಾಲ್ಲೂಕು ಹಿರಿಯ ಮೇಲ್ವಿಚಾರಕರಾದ ಚಿದಾನಂದ, ದೇವಿಕುಮಾರಿ ಇನ್ನಿತರರಿದ್ದರು.

ಮೈರಾಡ ಟಿ.ಬಿ. ರೀಚ್ ಸಂಸ್ಥೆ ವತಿಯಿಂದ ಟಿಬಿ ವಾರಿಯರ್ಸ್‌ಗಳಾದ ರಾಜಕುಮಾರ್, ಹಿರಿಯ ಚಿಕಿತ್ಸಾ ಮೇಲ್ವಿಚಾರಕ ರಾಜಕುಮಾರ್, ಪ್ರ.ಶಾ. ತಂತ್ರಜ್ಞೆ ಭಾಗ್ಯಮ್ಮ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು. ಪ್ರಾರಂಭದಲ್ಲಿ ಜಾಥಾ, ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಯಿಂದ ವೀರ ಮದಕರಿ ನಾಯಕ ವೃತ್ತದವರೆಗೆ ಸಾಗಿ ಘೋಷಣೆ ಮೂಲಕ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿತು.

## 28ರಂದು ಸಾಮೂಹಿಕ ಶ್ರೀ ಗಾಯತ್ರಿ ಪೂಜೆ ಹಾಗೂ ಉಪಾಸನೆ ಕಾರ್ಯಕ್ರಮ

ದಾವಣಗೆರೆ, ಮಾ. 25- ನಗರದ ಶ್ರೀ ಗಾಯತ್ರಿ ದೇವಿಯ ಉಪಾಸಕರ ಕ್ರಿಯಾತ್ಮಕ ಸಂಸ್ಥೆ ಶ್ರೀ ಗಾಯತ್ರಿ ಪರಿವಾರದಿಂದ ಹೋಳಿ ಹುಣ್ಣಿಮೆ ಅಂಗವಾಗಿ ಸಾಮೂಹಿಕ ಶ್ರೀ ಗಾಯಿತ್ರಿ ಪೂಜೆ ಇದೇ ದಿನಾಂಕ 28ರ ಭಾನುವಾರ ಬೆಳಿಗ್ಗೆ 7 ಗಂಟೆಗೆ ನಡೆಯಲಿದೆ ಎಂದು ಪರಿವಾರದ ಅಧ್ಯಕ್ಷೆ ಡಾ॥ ಸುಶೀಲಮ್ಮ ತಿಳಿಸಿದ್ದಾರೆ. ಜಯದೇವ ವೃತ್ತದ ಶ್ರೀ ಶಂಕರ ಮಠದಲ್ಲಿ ಕಾರ್ಯಕ್ರಮ ನಡೆಯಲಿದೆ ಎಂದು ಪರಿವಾರದ ಪ್ರಧಾನ ಕಾರ್ಯದರ್ಶಿ ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದ್ದಾರೆ.

## ಮರಾಠ ಸಮಾಜದಿಂದ ವಧು-ವರರ ಸಮಾವೇಶ



ದಾವಣಗೆರೆ, ಮಾ.25- ನಗರದ ಶ್ರೀ ಅಂಬಾ ಭವಾನಿ ಕಲ್ಯಾಣ ಮಂಟಪದಲ್ಲಿ ಕ್ಷತ್ರಿಯ ಮರಾಠ ಸಮಾಜದ ವತಿಯಿಂದ ರಾಜ್ಯ ಮಟ್ಟದ 3ನೇ ವಧು-ವರರ ಮುಖಾ-ಮುಖಿ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದ ನಿರೂಪಣೆಯನ್ನು ಸುರೇಂದ್ರರಾವ್ ದೇವದಾಸ್ ಮತ್ತು ಮಂಜೋಜಿರಾವ್ ಗಾಯಕವಾಡ ನಡೆಸಿಕೊಟ್ಟರು. ಶ್ರೀಮತಿ ಚೇತನಾ ಶಿವಕುಮಾರ್ ಸ್ವಾಗತಿಸಿದರು. ವಿಠೋಬರಾವ್ ನಲ್ಲೋಡೆ ಪ್ರಾರ್ಥಿಸಿದರು. ಇದೇ ಸಂದರ್ಭದಲ್ಲಿ ಷಹಾಜಿ ಮಹಾರಾಜ್ ಭೋಸ್ಲೆಯವರ 427ನೇ ಜಯಂತ್ಯೋತ್ಸವದ ಪ್ರಯುಕ್ತ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮೂಲಕ ನಮನ ಸಲ್ಲಿಸಲಾಯಿತು.

ಸಮಾವೇಶದ ಅಧ್ಯಕ್ಷತೆ ವಹಿಸಿದ್ದ ಮರಾಠ ಸಮಾಜದ ಅಧ್ಯಕ್ಷ ಡಿ. ಮಾಲತೇಶ್‌ರಾವ್ ಜಾಧವ್ ಮಾತನಾಡಿ, ವರದಕ್ಷಿಣೆ ತೆಗೆದುಕೊಳ್ಳದೇ ವಿವಾಹವನ್ನು ಮಾಡಿಕೊಳ್ಳಬೇಕೆಂದು ಸೂಚಿಸಿದರು.

ಕಾರ್ಯಕ್ರಮದ ರೂವಾರಿ ಎನ್.ಎಸ್ ಕೃಷ್ಣರಾವ್ ಸಾವಂತ್ ಪ್ರಾಸ್ತಾವಿಕವಾಗಿ ಮಾತನಾಡಿ, ಈ ಸಮಾವೇಶದ ಮೂಲಕ ಹೆಚ್ಚಿನ ಸಂಖ್ಯೆಯಲ್ಲಿ ವಿವಾಹಗಳು ಯಶಸ್ವಿಯಾಗಿ ನೆರವೇರಲೆಂದು ಆಶಿಸಿದರು.


ಎನ್.ಎಸ್. ಕೃಷ್ಣರಾವ್ ಸಾವಂತ್‌ರವರ ಕಿರು ಪರಿಚಯವನ್ನು ಬಿ. ಗುರುಮೂರ್ತಿಯವರು ಮಾಡಿಕೊಟ್ಟರು. ಅಜ್ಜಪ್ಪ ಪವಾರ್, ವೈ. ಮಲ್ಲೇಶ್ ಶಿಂಧೆ, ಜಿ.ಹೆಚ್. ಮರೋಜಿರಾವ್ ಮಾತನಾಡಿದರು. ಶ್ರೀಮತಿ ಗೌರಬಾಯಿ ಮೋಹಿತೆ, ಶ್ರೀಮತಿ ಅನುಸೂಯ ಬಾಯಿ ಜಾಧವ್ ಉಪಸ್ಥಿತರಿದ್ದರು.

## ಜಿ.ಪಂ.-ತಾ.ಪಂ. ಕ್ಷೇತ್ರಗಳ ನಿಗದಿ

ಹೂವಿನಹಡಗಲಿ, ಮಾ.25- ನೂತನ ವಿಜಯನಗರ ಜಿಲ್ಲೆಯ ಜಿಲ್ಲಾ ಪಂಚಾಯ್ತಿ ಹಾಗೂ ತಾಲ್ಲೂಕು ಪಂಚಾಯ್ತಿ ಕ್ಷೇತ್ರಗಳನ್ನು ನಿಗದಿ ಪಡಿಸಿ, ಸರ್ಕಾರ ಅಧಿಕೃತವಾಗಿ ಆದೇಶ ಹೊರಡಿಸಿದೆ.

ನೂತನ ವಿಜಯ ನಗರ ಜಿಲ್ಲೆಗೆ 31 ಸ್ಥಾನಗಳನ್ನು ಜಿಲ್ಲಾ ಪಂಚಾಯ್ತಿಗೆ ಹಾಗೂ 81 ತಾಲ್ಲೂಕು ಪಂಚಾಯ್ತಿ ಸ್ಥಾನಗಳನ್ನು ವಿಂಗಡಿಸಿ, ಸರಕಾರ ಬುಧವಾರ ಅಧಿಕೃತ ಆದೇಶ ಹೊರಡಿಸಿದೆ. ಹೂವಿನಹಡಗಲಿ 5, ಹೊಸಪೇಟೆ 4, ಹಗರಿ ಬೊಮ್ಮನಹಳ್ಳಿ 5, ಕೂಡ್ಲಿಗಿ 6, ಹರಪನಹಳ್ಳಿ 8, ಕೊಟ್ಟೂರು 3 ಮತ್ತು ತಾ.ಪಂ. ಗೆ ಹೊಸಪೇಟೆ 9, ಹೂವಿನಹಡಗಲಿ 14, ಹರಪನಹಳ್ಳಿ 21, ಹಗರಿಬೊಮ್ಮನ ಹಳ್ಳಿ 12, ಕೂಡ್ಲಿಗಿ 15, ಕೊಟ್ಟೂರು 11 ಸ್ಥಾನಗಳೆಂದು ನಿಗದಿಯಾಗಿದೆ.

## ಕಲಾಲ್ ಸಮಾಜದವರಿಗೆ ಸಿಎ ಸೈಟ್ ಪತ್ರ ವಿತರಣೆ




ದಾವಣಗೆರೆ, ಮಾ. 25- ನಗರದ ಕಲಾಲ್ ಸಮಾಜದವರಿಗೆ ದಾವಣಗೆರೆ ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ರವರು ಪ್ರಾಧಿಕಾರದ ಕಛೇರಿಯಲ್ಲಿ ಸಿಎ ಸೈಟ್ ಪತ್ರ ವಿತರಿಸಿದರು.

ಈ ಸಂದರ್ಭದಲ್ಲಿ ದಾವಣಗೆರೆ - ಹರಿಹರ ಸೂರ್ಯವಂಶ ಕ್ಷತ್ರಿಯ, ಕಲಾಲ್ ಕಾಟಿಕ್ ಸಮಾಜದ ಜಿಲ್ಲಾಧ್ಯಕ್ಷ ಮಾಲತೇಶ್ ಪತ್ತೇಪುರಿ, ಪ್ರಧಾನ ಕಾರ್ಯದರ್ಶಿ ಏಕನಾಥ ಕೆ. (ತಿಲಕ ಬನುಖಂಡಿ), ಗೌರವ ಅಧ್ಯಕ್ಷರು, ಅಧ್ಯಕ್ಷರು, ಪದಾಧಿಕಾರಿಗಳು, ರಾಮ್ ರಾಮ್, ಕರ್ನಾಟಕ ರಾಜ್ಯ ಸೂರ್ಯವಂಶ ಕ್ಷತ್ರಿಯ ಯುವ ಘಟಕದ ಮಾಧ್ಯಮ ಪ್ರತಿನಿಧಿ ಎಸ್. ಮಲ್ಲಿಕಾರ್ಜುನ್ ಶಾಪೂರಕರ್, ಸಮಾಜದ ಬಾಂಧವರು ಮುಖಂಡರು ಉಪಸ್ಥಿತರಿದ್ದರು.

# ಸಮನ್ವಯತೆಯಿಂದ ಅಭಿವೃದ್ಧಿ

ಬೆಂಗಳೂರು, ಮಾ. 25 - ಸಚಿವರು ಮತ್ತು ಶಾಸಕರ ನಡುವೆ ಸಮನ್ವಯತೆ ಇದ್ದರೆ ಮಾತ್ರ ಅಭಿವೃದ್ಧಿ ಸಾಧ್ಯ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಮ್ಮ ಸಹೋದ್ಯೋಗಿಗಳಿಗೆ ಕಿವಿಮಾತು ಹೇಳಿದ್ದಾರೆ.



ಗೃಹ ಕಚೇರಿ ಕೃಷ್ಣಾದಲ್ಲಿ ಶಾಸಕರ ದೂರುಗಳಿಗೆ ಸಂಬಂಧಿಸಿದಂತೆ ಸಚಿವರು ಮತ್ತು ಶಾಸಕರ ನಡುವೆ ಮುಖಾಮುಖಿ ಚರ್ಚೆ ನಡೆಸುವ ಸಂದರ್ಭದಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಸಂಬಂಧಿಸಿದಂತೆ ಸ್ಪಷ್ಟ ಸೂಚನೆಗಳನ್ನು ನೀಡಿದ್ದಾರೆ.

ಶಾಸಕರ ಅಹವಾಲುಗಳಿಗೆ ಸ್ಪಂದಿಸಿ, ಅವರ ಕೆಲಸ ಕಾರ್ಯಗಳಿಗೆ ಆದ್ಯತೆ ನೀಡಿ, ಅವರ ಜೊತೆ ಸೌಹಾರ್ದತೆ ಕಾಪಾಡಿಕೊಳ್ಳಿ ಎಂದು ತಿಳಿಸಿದ್ದಾರೆ.

ಶಾಸಕರು ಭೇಟಿ ಮಾಡಿದ ಎಲ್ಲಾ ಸಂದರ್ಭಗಳಲ್ಲೂ ನಿಮ್ಮ ವಿರುದ್ಧ ದೂರು ನೀಡುತ್ತಾರೆ. ಅವರಿಗೆ ಸ್ಪಂದಿಸದಿದ್ದರೆ, ಯಾವ ರೀತಿ ಅಭಿವೃದ್ಧಿಯಾಗುತ್ತದೆ? ಎಂದು ಸಚಿವರನ್ನು ಮುಖ್ಯಮಂತ್ರಿಯವರು ಪ್ರಶ್ನಿಸಿದ್ದಾರೆ. ಪ್ರತಿ ತಿಂಗಳು ಜಿಲ್ಲಾ ಸಭೆಗಳನ್ನು ನಡೆಸಿ, ಸ್ಥಳದಲ್ಲೇ ಶಾಸಕರ ಕೆಲಸ ಕಾರ್ಯಗಳಿಗೆ ಮನ್ನಣೆ ನೀಡಿ, ಅಧಿಕಾರಿಗಳ ಕಿವಿ ಹಿಂಡಿ, ಕೆಲಸ ಮಾಡಿಸಿ ಎಂದು ಹೇಳಿದ್ದಾರೆ.

ಮತ್ತೆ ಮತ್ತೆ ದೂರುಗಳು ನನ್ನ ಬಳಿ ಬರಬಾರದು. ಅದು ಬರದಂತೆ ನೋಡಿಕೊಳ್ಳಿ, ನಾನು ಸಹಿ ಮಾಡಿ ಕಳುಹಿಸಿದರೂ ಕೆಲವರು ಅದಕ್ಕೆ ಮನ್ನಣೆ ನೀಡುತ್ತಿಲ್ಲ. ಹೀಗಾದರೆ ಹೇಗೆ? ಎಂದು ಪ್ರಶ್ನಿಸಿದ್ದಾರೆ.

ಸುಮಾರು ಎರಡು, ಮೂರು ತಾಸುಗಳ ಕಾಲ ನಡೆದ ಸಭೆಯಲ್ಲಿ ಕೆಲವು ಶಾಸಕರು-ಸಚಿವರ ಸಮ್ಮುಖದಲ್ಲೇ ದೂರುಗಳ ಸರಮಾಲೆ ಇಟ್ಟಿದ್ದಾರೆ. ಇದಾದ ನಂತರ ಮುಖ್ಯಮಂತ್ರಿಯವರೇ ಖುದ್ದಾಗಿ ಶಾಸಕರ ಕೆಲಸಗಳಿಗೆ ಸ್ಥಳದಲ್ಲೇ ಅನುಮತಿ ದೊರಕಿಸಿಕೊಟ್ಟಿದ್ದಾರೆ. ಸಭೆಯಲ್ಲಿ ಬಹುತೇಕ ಸಚಿವರು ಆಡಳಿತ ಪಕ್ಷದ 35ಕ್ಕೂ ಹೆಚ್ಚು ಶಾಸಕರು ಸಭೆಯಲ್ಲಿ ಭಾಗವಹಿಸಿದ್ದರು.

# ಕ್ಷಯ: ಆತಂಕ ತೊರೆದು ಜಾಗೃತರಾಗಿರಿ




### ಜಗಳೂರು: ವಿಶ್ವ ಕ್ಷಯ ದಿನಾಚರಣೆಯಲ್ಲಿ ಟಿಹೆಚ್ಓ ನಾಗರಾಜ್

ಜಗಳೂರು, ಮಾ.25- ಕ್ಷಯ ರೋಗದ ಆಂತಕ ತೊರೆದು ಜಾಗೃತರಾಗುವ ಮೂಲಕ ಕ್ಷಯ ಮುಕ್ತ ದೇಶವನ್ನಾಗಿಸಲು ನಾವೆಲ್ಲರೂ ಕೈ ಜೋಡಿಸೋಣ ಎಂದು ತಾಲ್ಲೂಕು ವೈದ್ಯಾಧಿ ಕಾರಿ ಡಾ. ನಾಗರಾಜ್ ಸಲಹೆ ನೀಡಿದರು.

ಪಟ್ಟಣದ ತಾಲ್ಲೂಕು ಪಂಚಾಯ್ತಿ ಸಭಾಂಗಣ ದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ, ಜಿಲ್ಲಾ ಕುಟುಂಬ ಕಲ್ಯಾಣ ಇಲಾಖೆ, ಕುಷ್ಠ ರೋಗ ನಿಯಂತ್ರಣ ಘಟಕ ದಾವಣಗೆರೆ ಹಾಗೂ ತಾಲ್ಲೂಕು ಪಂಚಾಯ್ತಿ, ತಾಲ್ಲೂಕು ಆರೋಗ್ಯ ಇಲಾಖೆಗಳ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ವಿಶ್ವ ಕ್ಷಯ ದಿನಾಚರಣೆಯಲ್ಲಿ ಅವರು ಮಾತನಾಡಿದರು.

ಆಶಾ ಕಾರ್ಯಕರ್ತೆಯರು ಗ್ರಾಮೀಣ ಭಾಗಗಳಲ್ಲಿ ಪ್ರತಿನಿತ್ಯ ಕುಟುಂಬಗಳಲ್ಲಿನ ಜನ ಸಂಪರ್ಕದಲ್ಲಿದ್ದು ಕ್ಷಯ ರೋಗಿಗಳನ್ನು ಗುರುತಿಸಿ ತಪಾಸಣೆಗೆ ಆಸ್ಪತ್ರೆಗೆ ಕರೆದುಕೊಂಡು ಬರಬೇಕಿದೆ. ತಾಲ್ಲೂಕಿನಲ್ಲಿ 2020 ನೇ ಸಾಲಿನಲ್ಲಿ 166 ಕ್ಷಯ ಪ್ರಕರಣಗಳಲ್ಲಿ 105 ಜನ ಗುಣಮುಖರಾಗಿದ್ದು, ಇಬ್ಬರು ಮರಣ ಹೊಂದಿದ್ದಾರೆ. 34 ಜನ ಚಿಕಿತ್ಸೆ ಪಡೆಯುತ್ತಿದ್ದಾರೆ. ಕ್ಷಯ ರೋಗಿಗಳಿಗೆ ಪೌಷ್ಟಿಕಾಂಶಗಳ ಪೂರೈಕೆಗೆ ಪಿಎನ್‌ವೈ ಯೋಜನೆಯಡಿ ಮಾಸಿಕ ತಲಾ 500 ರೂ. ಸಹಾಯ ಧನ ಹಾಗೂ 6 ತಿಂಗಳ ಕಾಲ ಉಚಿತ ಚಿಕಿತ್ಸಾ ವ್ಯವಸ್ಥೆ ಕಲ್ಪಿಸಲಾಗಿದೆ. ರೋಗಿಗಳು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಡಾ.ಸಂಪತ್ ಮಾತನಾಡಿ, ಕೆಮ್ಮು, ಶೀತದ ಮೂಲಕ ಸೋಂಕು ಹರಡುವ ಸಂಭವವಿರುತ್ತದೆ. ಸಂಜೆ ವೇಳೆ ಜ್ವರ, ಕೆಮ್ಮುವಾಗ ರಕ್ತಸ್ರಾವ, ನಿಶ್ಯಕ್ತಿ ಪ್ರಮುಖ ಲಕ್ಷಣಗಳಾಗಿದ್ದು, ಹೆಚ್‌ಐವಿ ಮತ್ತು ಸಕ್ಕರೆ ಕಾಯಿಲೆ ರೋಗಿಗಳಲ್ಲಿ ಹೆಚ್ಚು ಕಂಡು ಬರುವ ಸಾಧ್ಯತೆಗಳಿದ್ದು, ಮುಂಜಾಗ್ರತಾ ಕ್ರಮ ಅನುಸರಿಸಬೇಕು ಎಂದು ತಿಳಿಸಿದರು. ಕ್ಷಯ ರೋಗಿಗಳು ಕೋವಿಡ್ ಲಸಿಕೆ ಪಡೆಯಲು ಯಾವುದೇ ಅಡ್ಡ ಪರಿಣಾಮಗಳಾಗುವುದಿಲ್ಲ. ಭಯ ಸಲ್ಲದು ಎಂದರು.

ಸಮಾರಂಭದಲ್ಲಿ ಕ್ಷಯ ರೋಗದಿಂದ ಗುಣಮುಖರಾದವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ತಹಶೀಲ್ದಾರ್ ಡಾ. ನಾಗವೇಣಿ, ತಾ.ಪಂ. ಇಓ ಮಲ್ಲಾನಾಯ್ಕ, ಬಿಇಓ ವೆಂಕಟೇಶ್, ನೌಕರರ ಸಂಘದ ಅಧ್ಯಕ್ಷ ಅಜ್ಜಪ್ಪ ನಾಡಿಗರ್, ಆರೋಗ್ಯ ಇಲಾಖೆ ಸಿಬ್ಬಂದಿಗಳಾದ ಸಿದ್ದೇಶ್ ಹಾಗೂ ಆಶಾ ಕಾರ್ಯಕರ್ತೆಯರು ಭಾಗವಹಿಸಿದ್ದರು.

## ರಾಜ್ಯ - ರಾಷ್ಟ್ರೀಯ ವಾರ್ತೆ

### ಕೊರೊನಾ ಲಾಕ್‌ಡೌನ್ ವೇಳೆ ಗೃಹ ಹಿಂಸಾಚಾರ ಹೆಚ್ಚಳ : ಆಯೋಗ

ನವದೆಹಲಿ, ಮಾ. 25 – ಕೊರೊನಾ ಲಾಕ್‌ಡೌನ್ ವೇಳೆ ಗೃಹ ಹಿಂಸಾಚಾರ ಪ್ರಕರಣಗಳ ಸಂಖ್ಯೆ ಗಣನೀಯವಾಗಿ ಹೆಚ್ಚಳವಾಗಿವೆ. 2019ರಲ್ಲಿ ಗೃಹ ಹಿಂಸಾಚಾರದ 2,960 ದೂರುಗಳಿದ್ದರೆ, ಇದು 2020ರಲ್ಲಿ 5,297ಕ್ಕೆ ತಲುಪಿದೆ ಎಂದು ರಾಷ್ಟ್ರೀಯ ಮಹಿಳಾ ಆಯೋಗ ತಿಳಿಸಿದೆ. 2019ರಲ್ಲಿ ಮಹಿಳೆಯರ ಮೇಲೆ ಅಪರಾಧ ನಡೆದ 19,730 ದೂರುಗಳು ಬಂದಿದ್ದವು. ಅದರ ಸಂಖ್ಯೆ 2020ರಲ್ಲಿ 23,722ಕ್ಕೆ ಏರಿಕೆಯಾಗಿದೆ ಎಂದು ಅಧಿಕೃತ ಅಂಕಿ, ಅಂಶಗಳು ತಿಳಿಸಿವೆ. ಲಾಕ್‌ಡೌನ್ ಹೇರಿದ ವರ್ಷದ ನಂತರ ಮಹಿಳಾ ದೌರ್ಜನ್ಯದ ದೂರುಗಳು ಪ್ರತಿ ತಿಂಗಳು 2 ಸಾವಿರದಷ್ಟು ಬರುತ್ತಿವೆ. ಇವುಗಳಲ್ಲಿ ಕಾಲು ಭಾಗದಷ್ಟು ಗೃಹ ಹಿಂಸಾಚಾರ ಪ್ರಕರಣಗಳಾಗಿವೆ. 2021ರ ಜನವರಿಯಿಂದ ಮಾರ್ಚ್ ನಡುವೆ ಗೃಹ ಹಿಂಸಾಚಾರದ 1,463 ದೂರುಗಳು ದಾಖಲಾಗಿವೆ.

### ಕ್ರಿಪ್ಟೋ ಕರೆನ್ಸಿ ಕಳವಳಗಳ ಕುರಿತು ಕೇಂದ್ರಕ್ಕೆ ತಿಳಿಸಲಾಗಿದೆ : ದಾಸ್

ಮುಂಬೈ, ಮಾ. 25 – ಕ್ರಿಪ್ಟೋ ಕರೆನ್ಸಿ ಮಾರುಕಟ್ಟೆ ನಿರ್ವಹಣೆ ಬಗ್ಗೆ ಪ್ರಮುಖ ಕಳವಳ ಇರುವುದಾಗಿ ಹೇಳಿರುವ ರಿಸರ್ವ್ ಬ್ಯಾಂಕ್ ಗವರ್ನರ್ ಶಕ್ತಿಕಾಂತ ದಾಸ್, ಈ ಬಗ್ಗೆ ಸರ್ಕಾರಕ್ಕೆ ತಿಳಿಸಲಾಗಿದೆ ಎಂದಿದ್ದಾರೆ.

ಸರ್ಕಾರ ಹಾಗೂ ಆರ್.ಬಿ.ಐ. ಹಣಕಾಸು ಸ್ಥಿರತೆಗೆ ಬದ್ಧವಾಗಿವೆ. ಈ ವಿಷಯದಲ್ಲಿ ಹಣಕಾಸು ಸಚಿವಾಲಯ ಹಾಗೂ ರಿಸರ್ವ್ ಬ್ಯಾಂಕ್ ನಡುವೆ ಯಾವುದೇ ಭಿನ್ನಾಭಿಪ್ರಾಯ ಇಲ್ಲ. ಈ ವಿಷಯದಲ್ಲಿ ಕೇಂದ್ರ ಸರ್ಕಾರದ ಅಂತಿಮ ನಿರ್ಧಾರಕ್ಕೆ ಕಾಯಬೇಕಿದೆ ಎಂದವರು ತಿಳಿಸಿದ್ದಾರೆ.

ಕ್ರಿಪ್ಟೋ ಕರೆನ್ಸಿ ಬಗ್ಗೆ ಸರ್ಕಾರ ಗೊಂದಲದ ಸಂಕೇತ ನೀಡುತ್ತಿದೆ ಎಂಬ ಮಾತುಗಳು ಕೇಳಿ ಬರುತ್ತಿದ್ದವು. ಮೊದಲು ಕ್ರಿಪ್ಟೋ ಕರೆನ್ಸಿ ಮೇಲೆ ಸಂಪೂರ್ಣ ನಿಷೇಧ ಹೇರಲು ಒಲವು ತೋರಲಾಗಿತ್ತು. ನಂತರ ಸರ್ಕಾರ ಬಿಟ್‌ಕಾಯಿನ್ ರೀತಿಯ ಮೃದುತ್ವಕ್ಕೆ ಇಂಗಿತ ವ್ಯಕ್ತಪಡಿಸಿತ್ತು.

ರಿಸರ್ವ್ ಬ್ಯಾಂಕ್‌ನ ಡಿಜಿಟಲ್ ಹಣ ಹಾಗೂ ಕ್ರಿಪ್ಟೋ ಕರೆನ್ಸಿಗಳು ಬೇರೆ ಬೇರೆಯಾಗಿವೆ. ರಿಸರ್ವ್ ಬ್ಯಾಂಕ್ ಹಾಗೂ ಸರ್ಕಾರ ಎರಡೂ ಹಣಕಾಸು ಸ್ಥಿರತೆಗೆ ಬದ್ಧವಾಗಿವೆ. ನಾವು ಕ್ರಿಪ್ಟೋ ಕರೆನ್ಸಿ ಮಾರಾಟದ ಬಗ್ಗೆ ಕೆಲ ಕಳವಳಗಳನ್ನು ವ್ಯಕ್ತಪಡಿಸಿದ್ದೇವೆ. ಈ ಬಗ್ಗೆ ಕೇಂದ್ರ ಸರ್ಕಾರದ ಗಮನಕ್ಕೆ ತಂದಿದ್ದೇವೆ. ಈ ವಿಷಯ ಇನ್ನೂ ಸರ್ಕಾರದ ಪರಿಶೀಲನೆಯಲ್ಲಿದೆ. ಶೀಘ್ರದಲ್ಲೇ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ದಾಸ್ ತಿಳಿಸಿದ್ದಾರೆ.

### ಎರಡು ದಿನಗಳಲ್ಲಿ ಲಕ್ಷ ಸೋಂಕಿತರು

ನವದೆಹಲಿ, ಮಾ. 25 – ಗುರುವಾರ ಒಂದೇ ದಿನ ದೇಶದಲ್ಲಿ 53,476 ಜನರಲ್ಲಿ ಕೊರೊನಾ ವೈರಸ್ ಸೋಂಕು ಕಾಣಿಸಿಕೊಂಡಿದ್ದು, ಎರಡೇ ದಿನಗಳಲ್ಲಿ ಲಕ್ಷಕ್ಕೂ ಹೆಚ್ಚು ಜನ ಸೋಂಕಿಗೆ ಸಿಲುಕಿದ್ದಾರೆ ಎಂದು ಕೇಂದ್ರ ಆರೋಗ್ಯ ಸಚಿವಾಲಯದ ಅಂಕಿ-ಅಂಶಗಳು ತಿಳಿಸಿವೆ.

ಸತತ ಹದಿನೈದು ದಿನಗಳಿಂದ ಸಕ್ರಿಯ ಸೋಂಕಿತರ ಸಂಖ್ಯೆ ಹೆಚ್ಚಾಗುತ್ತಾ 3.95 ಲಕ್ಷಕ್ಕೆ ತಲುಪಿದೆ. ಗುರುವಾರದಂದು 251 ಜನ ಕೊರೊನಾದಿಂದ ಸಾವನ್ನಪ್ಪಿದ್ದಾರೆ. ಇವರಲ್ಲಿ 95 ಜನ ಮಹಾರಾಷ್ಟ್ರದವರು, 39 ಪಂಜಾಬ್, 29 ಛತ್ತೀಸ್‌ಘಡ, ತಲಾ 12 ತಮಿಳುನಾಡು ಹಾಗೂ ಕರ್ನಾಟಕ ಮತ್ತು 10 ಕೇರಳದವರಾಗಿದ್ದಾರೆ.

### ಪತ್ರಕರ್ತೆ ಫೇಸ್‌ಬುಕ್ ವಿರುದ್ಧದ ಎಫ್‌ಐಆರ್ ವಜಾ

ನವದೆಹಲಿ, ಮಾ. 25 - ಫೇಸ್‌ಬುಕ್ ಪೋಸ್ಟ್ ಮೂಲಕ ಕೋಮು ಸಾಮರಸ್ಯ ಕದಡಿದ ಆರೋಪದ ಮೇಲೆ ಪತ್ರಕರ್ತೆ ಪ್ಯಾಟ್ರಿಶಿಯ ಮುಖಿಮ್ ವಿರುದ್ಧ ದಾಖಲಿಸಲಾಗಿದ್ದ ಎಫ್.ಐ.ಆರ್. ಅನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ. ಮುಖಿಮ್ ವಿರುದ್ಧದ ಎಫ್.ಐ.ಆರ್. ರದ್ದುಗೊಳಿಸಲು ಮೇಘಾಲಯ ಹೈಕೋರ್ಟ್ ನಿರಾಕರಿಸಿತ್ತು. ನಂತರ ಅವರು ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು.

### ಬ್ರಾಂಡ್‌ನಲ್ಲಿ ಘಟಿಂಗ ಪದ ಬಳಕೆ ವಿರೋಧಿಸಿದ ಅರ್ಜಿ ತಿರಸ್ಕೃತ

ನವದೆಹಲಿ, ಮಾ. 25 - ಪುರುಷರ ಅಲಂಕಾರ ವಸ್ತುಗಳನ್ನು ಉತ್ಪಾದಿಸುವ ಬ್ರಾಂಡ್ ಒಂದು ಬಳಸಿದ 'ಪ್ರಾಣಿಗಳ ಮೇಲೆ ಪ್ರಯೋಗ ಮಾಡಿಲ್ಲ, ಘಟಿಂಗರ ಮೇಲೆ ಮಾತ್ರ ಪ್ರಯೋಗ ಮಾಡಲಾಗಿದೆ' ಎಂದು ಅಡಿ ಟಿಪ್ಪಣಿ ಮಾಡಿದ್ದನ್ನು ಪ್ರಶ್ನಿಸಿ ದಾಖಲಾಗಿದ್ದ ಅರ್ಜಿಯನ್ನು ದೆಹಲಿ ಹೈಕೋರ್ಟ್ ವಿಚಾರಣೆಗೆ ಸ್ವೀಕರಿಸದೇ ತಳ್ಳಿ ಹಾಕಿದೆ.

ಘಟಿಂಗ ಎಂಬ ಪದದ ಬಳಕೆ ಆಕ್ಷೇಪಾರ್ಹವಲ್ಲ. ಈ ಪದದಿಂದ ಯಾವುದೇ ಧರ್ಮದ ಭಾವನೆಗಳಿಗೆ ಧಕ್ಕೆಯಾಗುವುದಿಲ್ಲ ಎಂದು ನ್ಯಾಯಮೂರ್ತಿ ಪ್ರತೀಕ್ ಜಲಾನ್ ಹೇಳಿದ್ದಾರೆ.

ಉಸ್ತ್ರಾ ಎಂಬ ಬ್ರಾಂಡ್ ಬಳಸಿರುವ ಘಟಿಂಗ ಎಂಬ ಪದ ಅನಾಗರಿಕವಾದದ್ದು. ಅದರ ಬ್ರಾಂಡ್ ವಸ್ತುಗಳ ಮಾರಾಟಕ್ಕೆ ಅನುಮತಿ ನೀಡಬಾರದು ಎಂದು ಅರ್ಜಿ ಸಲ್ಲಿಸಲಾಗಿತ್ತು. ಹ್ಯಾಪಿಲಿ ಅನ್‌ಮ್ಯಾರೀಡ್ ಮಾರ್ಕೆಟಿಂಗ್ ಕಂಪನಿಯು ಈ ಬ್ರಾಂಡ್ ಒಡೆತನ ಹೊಂದಿದೆ. ಇಂತಹ ಕ್ಷುದ್ರ, ಅರ್ಥಹೀನ ಹಾಗೂ ಸಮಯ ಹಾಳುವ ಮಾಡುವ ಅರ್ಜಿಗಳಿಗೆ ದಂಡವನ್ನೂ ವಿಧಿಸಬೇಕು ಎಂದು ನ್ಯಾಯಾಲಯ ಅಸಮಾಧಾನ ವ್ಯಕ್ತಪಡಿಸಿದೆ. ನಂತರ ಅರ್ಜಿದಾರರು ತಮ್ಮ ಅರ್ಜಿಯನ್ನು ವಾಪಸ್ ಪಡೆದಿದ್ದಾರೆ.

### ಸಂಸತ್ತಿನ ಮಸೂದೆಗಳ ವಿರುದ್ಧ ಸುಪ್ರೀಂಗೆ ಮೊರೆ : ಕಾಂಗ್ರೆಸ್

ನವದೆಹಲಿ, ಮಾ. 25 – ಸಂಸತ್ತಿನ ಬಜೆಟ್ ಅಧಿವೇಶನದಲ್ಲಿ ಜಾರಿಗೆ ತರಲಾದ ಮಸೂದೆಗಳನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲಾಗುವುದು ಎಂದು ಕಾಂಗ್ರೆಸ್ ತಿಳಿಸಿದೆ.

ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಕಾಂಗ್ರೆಸ್ ನಾಯಕರಾದ ಮಲ್ಲಿಕಾರ್ಜುನ ಖರ್ಗೆ, ಜೈರಾಮ್ ರಮೇಶ್ ಹಾಗೂ ರವನೀತ್ ಸಿಂಗ್ ಬಿಟ್ಟು, ಪ್ರಸಕ್ತ ಸಂಸತ್ ಅಧಿವೇಶನ ಏಪ್ರಿಲ್ 8ರವರೆಗೆ ಮುಂದುವರೆಯಲಿ ಎಂದು ನಾವು ಬಯಸಿದ್ದೆವು. ಆದರೆ, ಸರ್ಕಾರ ನೆಪಗಳನ್ನು ನೀಡಿ ಅವಧಿ ಮೊಟಕುಗೊಳಿಸಿದೆ ಎಂದಿದ್ದಾರೆ.

ಸಂಸತ್ತಿನಲ್ಲಿ ಜಾರಿಗೆ ತರಲಾದ ಪ್ರತಿಯೊಂದು ಮಸೂದೆಯನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸುತ್ತೇವೆ. ಇದರಲ್ಲಿ ಯಾವುದೇ ಅನುಮಾನವಿಲ್ಲ ಎಂದು ರಮೇಶ್ ಹೇಳಿದ್ದಾರೆ.

### ಹೊರ ರಾಜ್ಯದಿಂದ ಬೆಂಗಳೂರಿಗೆ ಬರುವವರಿಗೆ ಟೆಸ್ಟ್ ಕಡ್ಡಾಯ

ಬೆಂಗಳೂರು, ಮಾ. 25 - ಹೊರ ರಾಜ್ಯಗಳಿಂದ ಬೆಂಗಳೂರಿಗೆ ಬರುವ ಪ್ರಯಾಣಿಕರು ಆರ್‌ಟಿ - ಪಿಸಿಆರ್ ನೆಗೆಟಿವ್ ಪ್ರಮಾಣ ಪತ್ರ ಹೊಂದುವುದು ಕಡ್ಡಾಯ ಎಂದು ಆರೋಗ್ಯ ಸಚಿವ ಕೆ. ಸುಧಾಕರ್ ತಿಳಿಸಿದ್ದಾರೆ. ಕೊರೊನಾ ನಿಯಂತ್ರಣಕ್ಕಾಗಿ ಸಭೆಯೊಂದನ್ನು ನಡೆಸಿದ ನಂತರ ಮಾತನಾಡಿರುವ ಸಚಿವರು, ಬೆಂಗಳೂರು ನಗರ ಪಾಲಿಕೆ ವ್ಯಾಪ್ತಿಯಲ್ಲಿ ರುವ ಸೋಂಕಿತರ ಕೈಗೆ ಸೀಲ್ ಹಾಕಲು ನಿರ್ಧರಿಸಲಾಗಿದೆ ಎಂದು ಹೇಳಿದ್ದಾರೆ.

ಬೆಂಗಳೂರಿನಲ್ಲಿ ಬುಧವಾರ 1,400 ಕೊರೊನಾ ಸೋಂಕು ಪತ್ತೆಯಾಗಿದೆ. ಇದು ನಾಲ್ಕು ತಿಂಗಳಲ್ಲೇ ಅತಿ ಹೆಚ್ಚು ಎಂದವರು ಹೇಳಿದ್ದಾರೆ. ಪ್ರಸಕ್ತ ಮಹಾರಾಷ್ಟ್ರ, ಕೇರಳ, ಪಂಜಾಬ್ ಹಾಗೂ ಚಂಡೀಘಡಗಳಿಂದ ಬರುವವರು ಕೊರೊನಾ ಪರೀಕ್ಷೆಯ ನೆಗೆಟಿವ್ ಪ್ರಮಾಣ ಪತ್ರ ಬರಬೇಕಿತ್ತು. ಇದನ್ನು ಈಗ ಎಲ್ಲಾ ರಾಜ್ಯ ಗಳಿಗೆ ವಿಸ್ತರಿಸಲಾಗಿದೆ ಎಂದು ಹೇಳಿದ್ದಾರೆ.

# ದೊಡ್ಡಬಾತಿ ರಥೋತ್ಸವದಲ್ಲಿ ಇಂದು

ದಾವ ಣಗೆರೆ ತಾಲ್ಲೂಕು ದೊಡ್ಡಬಾತಿ ಗ್ರಾಮದಲ್ಲಿ ದಿನಾಂಕ



27 ರ ಶನಿವಾರ ನಡೆಯಲಿರುವ ಶ್ರೀ ರೇವಣ ಸಿದ್ದೇಶ್ವರ ಸ್ವಾಮಿಯ ರಥೋತ್ಸವದ ಅಂಗವಾಗಿ ಇಂದು ಆವರಗೊಳ್ಳದ ಶ್ರೀ ವೀರಭದ್ರೇಶ್ವರ ಸ್ವಾಮಿಯನ್ನು ದೇವಸ್ಥಾನಕ್ಕೆ ಕರೆ ತರುವುದು ಮತ್ತು ರಾತ್ರಿ ಪತ್ತಾರ್ ಮನೆತನದವರಿಂದ ಶ್ರೀ ಸ್ವಾಮಿಗೆ ಅರಿಶಿಣ ಎಣ್ಣೆ ಕಾರ್ಯವು ನಡೆಯುವುದು. ಭಕ್ತರು ಸಾಮಾಜಿಕ ಅಂತರ ಕಾಯ್ದುಕೊಳ್ಳುವ ಜೊತೆಗೆ ಮಾಸ್ಕ್ ಧರಿಸುವಂತೆ ದೇವಸ್ಥಾನ ಕಮಿಟಿಯವರು ಕೋರಿದ್ದಾರೆ.

# ನಗರದಲ್ಲಿ ಇಂದು ದತ್ತಿ ಉಪನ್ಯಾಸ

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್‌ನ ಕದಳಿ ಮಹಿಳಾ ವೇದಿಕೆಯ ನಗರ ಘಟಕದ ವತಿಯಿಂದ 123ನೇ ಕಮ್ಮಟದಲ್ಲಿ ದತ್ತಿ ಉಪನ್ಯಾಸ ವಾಟ್ಸಾಪ್ ಕಾರ್ಯಕ್ರಮವನ್ನು ಇಂದು ಬೆಳಿಗ್ಗೆ 11 ಕ್ಕೆ ಹಮ್ಮಿಕೊಳ್ಳಲಾಗಿದೆ.

ಅಧ್ಯಕ್ಷತೆಯನ್ನು ಶ್ರೀಮತಿ ವಿನೋದ ಅಜಗಣ್ಣನವರ್ ವಹಿಸುವರು. ಕಾರ್ಯಕ್ರಮದಲ್ಲಿ ಲಿಂ. ಡಾ. ಶಶಿಕಲಾ ದತ್ತಿ ದಾನಿಗಳಾದ ಶ್ರೀಮತಿ ಮಾಗನೂರು ಗಿರಿಜಮ್ಮ ಸೋಮಶೇಖರಗೌಡ್ರು ಅವರಿಂದ, ಲಿಂ. ಯಳಗೋಡ್ರು ಚನ್ನಬಸಮ್ಮ ಮತ್ತು ಯಳಗೋಡ್ರು ಬಸಪ್ಪ ದತ್ತಿ ದಾನಿಗಳಾದ ಶ್ರೀಮತಿ ಎಂ. ಶೈಲ ಮತ್ತು ಬಿ.ಎನ್.ಎಂ ಸ್ವಾಮಿ (ಜಗಳೂರು) ಇವರಿಂದ ಹಾಗೂ ಲಿಂ. ಗೌರಮ್ಮ ಮತ್ತು ವೀರಭದ್ರಯ್ಯ ಹಂಜಗಿಮಠ ದತ್ತಿ ದಾನಿಗಳಾದ ಹೆಚ್.ಎಂ. ಮಹಾರುದ್ರಯ್ಯ ಅವರಿಂದ ನಡೆಯಲಿದೆ.

ಕಾರ್ಯಕ್ರಮದಲ್ಲಿ ಬಸವನಗೌಡ ಗೌಡರ್ ಅವರು '12ನೇ ಶತಮಾನದಲ್ಲಿ ಶರಣರ ವೈಚಾರಿಕ ನಿಲುವು' ವಿಷಯವಾಗಿ ಹಾಗೂ ಶ್ರೀಮತಿ ನೇತ್ರಾ ಮಂಜುನಾಥ್ ಅವರು 'ನನಗೆ ಇಷ್ಟವಾದ ವಚನ' ವಿಷಯ ಕುರಿತು ಉಪನ್ಯಾಸ ನೀಡುವರು.

# ಬೋಳಚಟ್ಟಿ ಚೌಡೇಶ್ವರಿ ದೇವಿ ಜಾತ್ರೆಯಲ್ಲಿಂದು ಬುತ್ತಿ ಪೂಜೆ

ನಗರದ ಚೌಡೇಶ್ವರಿ ನಗರ ರುದ್ರಭೂಮಿ ರಸ್ತೆಯಲ್ಲಿರುವ ಬೋಳಚಟ್ಟಿ ಚೌಡೇಶ್ವರಿ ದೇವಿಯ ಎಡೆ ಜಾತ್ರೆ ಕಾರ್ಯಕ್ರಮದಲ್ಲಿ ಇಂದು ಬೆಳಿಗ್ಗೆ ಬುತ್ತಿ ಪೂಜೆಯೊಂದಿಗೆ ಮುಕ್ತಾಯ ಸಮಾರಂಭ ನಡೆಯುವುದು.

# ಲಸಿಕೆ ಪಡೆದ ರವೀಂದ್ರನಾಥ್



ದಾವಣಗೆರೆ, ಮಾ.25- ನಗರದ ಚಿಗಟೇರಿ ಜಿಲ್ಲಾ ಆಸ್ಪತ್ರೆಯಲ್ಲಿ ಗುರುವಾರ ಉತ್ತರ ವಿಧಾನಸಭಾ ಕ್ಷೇತ್ರದ ಶಾಸಕ ಎಸ್.ಎ ರವೀಂದ್ರನಾಥ್ ಕೋವ್ಯಾಕ್ಸಿನ್ ಲಸಿಕೆ ಪಡೆದರು. ಲಸಿಕೆಯ ಮೊದಲನೇ ಡೋಸ್ ಪಡೆದ ಶಾಸಕರು, ನಂತರ ಅರ್ಧ ಗಂಟೆ ನಿಗಾವಣೆಯಲ್ಲಿದ್ದು, ಮನೆಗೆ ತೆರಳಿದರು. ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ನಾಗರಾಜ್, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ರಾಘವನ್, ಡಾ. ರಾಘವೇಂದ್ರ ಇತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ನಾಳೆಯಿಂದ ಕ್ರಿಕೆಟ್ ಟೂರ್ನಿ

ಮಲೇಬೆನ್ನೂರು, ಮಾ.25- ಕೊಮಾರನಹಳ್ಳಿ ಗ್ರಾಮದ ಫ್ರೆಂಡ್ಸ್ ಕ್ರಿಕೆಟರ್ಸ್ ವತಿಯಿಂದ ಪ್ರಥಮ ಬಾರಿಗೆ ಟೆನ್ನಿಸ್ ಬಾಲ್ ಕ್ರಿಕೆಟ್ ಟೂರ್ನಿಯನ್ನು ನಾಳೆ ದಿನಾಂಕ 27 ರಿಂದ 29 ರವರೆಗೆ ಹಮ್ಮಿಕೊಳ್ಳಲಾಗಿದೆ. ಪ್ರಥಮ ಬಹುಮಾನ 35 ಸಾವಿರ ರೂ. ಹಾಗೂ ಆಕರ್ಷಕ ಟ್ರೋಫಿ ಮತ್ತು ದ್ವಿತೀಯ ಬಹುಮಾನ 25 ಸಾವಿರ ರೂ. ಹಾಗೂ ಆಕರ್ಷಕ ಟ್ರೋಫಿ ಒಳಗೊಂಡಿರುತ್ತದೆ. ಆಸಕ್ತ ತಂಡಗಳು 1500 ರೂ. ಪ್ರವೇಶ ಶುಲ್ಕದೊಂದಿಗೆ ಹೆಸರು ನೋಂದಾಯಿಸುವಂತೆ ಸುನೀಲ್ (97397-80100), ಹಾಲೇಶ್ (99648-84372), ಚೇತನ್ (97393-48424) ಇವರನ್ನು ಸಂಪರ್ಕಿಸುವುದು.

# ಮುಂದೂಡಿಕೆ

ಕೊರೊನಾ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಇಂದಿನಿಂದ 28ರ ವರೆಗೆ ಕ್ವೀನ್‌ಸ್ಟನ್ ಹೈಟ್ಸ್ ಸಂಸ್ಥೆ ವತಿಯಿಂದ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ಇಂದಿನಿಂದ ಹಮ್ಮಿಕೊಂಡಿದ್ದ ಮೆಗಾ ಸ್ಕೂಲ್ ಅಡ್ಮಿಷನ್ ಎಕ್ಸ್‌ಪೋ ಮುಂದೂಡಲಾಗಿದೆ. ಮುಂದಿನ ದಿನಾಂಕವನ್ನು ತಿಳಿಸಲಾಗುವುದು. ವಿದ್ಯಾರ್ಥಿಗಳು ಹಾಗೂ ಪೋಷಕರು ಸಹಕರಿಸುವಂತೆ ಕಾರ್ಪೊರೇಟ್ ಮುಖ್ಯಸ್ಥೆ ಆಯಿಷಾ ಕೋರಿದ್ದಾರೆ.

# ಸಂಸತ್ತಿನ ಬಜೆಟ್ ಅಧಿವೇಶನಕ್ಕೆ ತೆರೆ

ನವದೆಹಲಿ, ಮಾ. 25 – ಸುಮಾರು ಎರಡು ತಿಂಗಳ ಕಾಲ ನಡೆದ ಬಜೆಟ್ ಅಧಿವೇಶನ ಮುಕ್ತಾಯ ಕಂಡಿದ್ದು, ಸಂಸತ್ ಕಲಾಪವನ್ನು ಅನಿರ್ದಿಷ್ಟ ಅವಧಿಗೆ ಮುಂದೂಡಲಾಗಿದೆ. ಜನವರಿ 29ರಂದು ಆರಂಭ ವಾದ ಅಧಿವೇಶನ ಏಪ್ರಿಲ್ 8ರವರೆಗೆ ನಡೆಯಬೇಕಿತ್ತು. ಆದರೆ, ವಿಧಾನಸಭಾ ಚುನಾವಣೆಗಳ ಹಿನ್ನೆಲೆಯಲ್ಲಿ ಕಲಾಪವನ್ನು ಅವಧಿಗೆ ಮುಂಚೆ ಅಂತ್ಯಗೊಳಿಸಲಾಗಿದೆ.

**ಜಮೀನು ಮಾರಾಟಕ್ಕಿದೆ**
ಹರಪನಹಳ್ಳಿ ತಾಲ್ಲೂಕು ಅರಸೀಕೆರೆ ಹೋಬಳಿ ಹಿರೇಮೇಗಳಗೆರೆ ಗ್ರಾಮದಲ್ಲಿ 5.53 ಮತ್ತು 6.55 ಎಕರೆ ಅಕ್ಕ ಪಕ್ಕ ಇರುವ ಒಟ್ಟು ವಿಸ್ತೀರ್ಣ 12.08 ಎಕರೆ. ಅಕ್ಕ ಪಕ್ಕದಲ್ಲಿ ರಸ್ತೆ, 3 ಬೋರ್‌ಗಳಿವೆ. ದಾವಣಗೆರೆಯಿಂದ 10 ಕಿ.ಮೀ. ಹತ್ತಿರದಲ್ಲಿದೆ.
ಬೂಸ್ನೂರು ಕಿರಣ್ (ಏಜೆಂಟ್) 98440 63409, 97315 63409

**ಮಾಸ್ಕ್ ಬಳಸಿ ಕೊರೊನಾ ತೊಲಗಿಸಿ**

**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ : ಮೊ. : 98453 17181

**ಸೈಟುಗಳು ಮಾರಾಟಕ್ಕಿವೆ**
ಮಹಾಲಕ್ಷ್ಮಿ ಲೇಔಟ್‌ನಲ್ಲಿ ಮತ್ತು ಸುತ್ತ-ಮುತ್ತ ಲೇಔಟ್‌ನಲ್ಲಿ 30x40 East, 30x40 South, 40x58 South, 49x58 South, 30x50 South, 30x45 North west corner
ಐನಳ್ಳಿ ಚನ್ನಬಸಪ್ಪ ಏಜೆಂಟ್ 93410 14130 99166 12110

**ಬೇಕಾಗಿದ್ದಾರೆ**
ಪಿ.ಜೆ. ಬಡಾವಣೆ ಗುಡ್ ಫುಡ್ ರೆಸ್ಟೋರೆಂಟ್ ನಲ್ಲಿ ಕ್ಲೀನಿಂಗ್ ಕೆಲಸ ಮಾಡಲು ಮಹಿಳೆಯರು ಬೇಕಾಗಿದ್ದಾರೆ. ತಿಂಗಳಿಗೆ 10 ಸಾವಿರ ರೂ. ಸಂಬಳ ಕೊಡಲಾಗುವುದು. ಬೆಳಿಗ್ಗೆ 8 ರಿಂದ ಸಂಜೆ 6ರವರೆಗೆ. ಮೊ. 99000-04555

**ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟುಗಳು ಮಾರಾಟಕ್ಕಿವೆ**
30x40 East, 30x40 North, 30x40 West, 30x40 South, 40x60 East, 40x60 North
ಐನಳ್ಳಿ ಚನ್ನಬಸಪ್ಪ ಏಜೆಂಟ್ 93410 14130, 99166 12110

**ಕಾರುಗಳು ಬೇಕಾಗಿವೆ**
ಸೆಕೆಂಡ್ ಹ್ಯಾಂಡ್ ಕಾರು ಮಾರಾಟಕ್ಕೆ ಇವೆಯೇ ಅಥವಾ ನಿಮಗೆ ಕೊಳ್ಳುವುದಕ್ಕೆ ಬೇಕೇ ? ವಿಚಾರಿಸಿ : ಕಿರಣ್ ಬೂಸ್ನೂರ್ : 98440-63409 (ನಮ್ಮ ವ್ಯವಹಾರ ಕಮೀಷನ್ ಆಧಾರದ ಮೇಲೆ)

**ಅಪಾರ್ಟ್‌ಮೆಂಟ್‌ನಲ್ಲಿ ಮನೆ ಮಾರಾಟಕ್ಕಿದೆ**
ಅಪಾರ್ಟ್‌ಮೆಂಟ್‌ನಲ್ಲಿ 3 BHK ಪೂರ್ವ ದಿಕ್ಕಿನ ಮನೆ ಜಯನಗರದಲ್ಲಿ ಮಾರಾಟಕ್ಕಿದೆ SS ಹೈಟೆಕ್ ಬಡಾವಣೆ, 30x50 ಪಶ್ಚಿಮ ದಿಕ್ಕಿನ ಮನೆ ಮಾರಾಟಕ್ಕಿದೆ. 99457 02495, ಐಗೂರು ವಿಜಯ್ ಕುಮಾರ್ 95911 60520 -ಸುರೇಶ್

**ಮನೆಯ ರೀ ಪೇಂಟಿಂಗ್**
ಹಳೆಯ ಮನೆಯನ್ನು ಹೊಸದಾಗಿ ಪೇಂಟಿಂಗ್ ಮಾಡಿಸಿಕೊಳ್ಳಿ, ಕಡಿಮೆ ದರದಲ್ಲಿ 72046 33302

**RCC ಮನೆ ಮಾರಾಟಕ್ಕಿದೆ**
ದಾವಣಗೆರೆಯಲ್ಲಿ 40x15 ಅಳತೆಯಲ್ಲಿ ಹೊಸದಾಗಿ ಕಟ್ಟಿದ ಗ್ರೌಂಡ್‌ಫ್ಲೋರ್+1ನೇ ಮಹಡಿ ಪಿ.ಬಿ ರಸ್ತೆ, ಪೂಜಾ ಇಂಟರ್ ನ್ಯಾಷನಲ್ ಹೋಟೆಲ್ ಎದುರಿಗೆ ರಿಲಾಯನ್ಸ್ ಪಕ್ಕ. ಸಂಪರ್ಕಿಸಿ ಮೊ: 94480 85581

**ಸೈಟ್ ಬೇಕಾಗಿದೆ**
ಎಸ್.ಎಸ್. ಲೇಔಟ್‌ನಲ್ಲಿ 80 x 60, 60 x 100 99863 72527

**ಬೇಕಾಗಿದ್ದಾರೆ**
ಸುಪ್ರಸಿದ್ಧ ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಸೇಲ್ಸ್‌ಗರ್ಲ್ಸ್, ಸೇಲ್ಸ್‌ಬಾಯ್ಸ್ ಮತ್ತು ಕ್ಯಾಷಿಯರ್ ಬೇಕಾಗಿದ್ದಾರೆ. ಸಂಪರ್ಕಿಸಿ : ಮೊ. : 87622 21696

**ಗಾರ್ಡನ್‌ನಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ**
ಸಂಪರ್ಕಿಸಿ : ನೂತನ ಕಾಲೇಜ್, 6000/- ಸಂಬಳ ಬೆಳಿಗ್ಗೆ 8 ರಿಂದ ಸಂಜೆ 6 ರವರೆಗೆ ಮೊ.: 97417 23358

**ಜಗಳೂರಿನಲ್ಲಿ ಜಮೀನು ಬೇಕಾಗಿದೆ**
ಜಗಳೂರು ಅಕ್ಕಪಕ್ಕದಲ್ಲಿ ಜಮೀನು (ಹೊಲ) ಬೇಕಾಗಿದೆ. ಸಂಪರ್ಕಿಸಿ : ಮೊ. : 99643 99129

**ತಕ್ಷಣ ಬೇಕಾಗಿದ್ದಾರೆ**
ಡಿ. ಫಾರ್ಮಸಿ ಆದವರು QP ಮತ್ತು ಕೆಲಸ ಮಾಡಲು ಮಹಿಳಾ ಅಥವಾ ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಮತ್ತು ಮೆಡಿಕಲ್ ಶಾಪ್‌ನಲ್ಲಿ ಕೆಲಸ ಮಾಡಲು ಅನುಭವ ಇರುವ ಮಹಿಳಾ ಅಥವಾ ಪುರುಷರು ಬೇಕಾಗಿದ್ದಾರೆ. 89714 03988, 63608 62101

**ಮನೆ ಬಾಡಿಗೆಗೆ ಇದೆ**
1ನೇ ಮಹಡಿ, ಸಿಂಗಲ್ ಬೆಡ್ ರೂಂ, 25x18 ಅಳತೆಯ ಉತ್ತರ ಮುಖವಿರುವ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ: #3428/M-126, 'ಬಸವಶ್ರೀ' ನಿಲಯ, ಬಸವೇಶ್ವರ ನಗರ, ದಾವಣಗೆರೆ. ಮೊ: 97312 76324 94494 02488

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಗೆ 18 ರಿಂದ 25 ವರ್ಷದೊಳಗಿನ ಸೇಲ್ಸ್ ಗರ್ಲ್ಸ್ ಮತ್ತು ಸೇಲ್ಸ್ ಬಾಯ್ಸ್ ಬೇಕಾಗಿದ್ದಾರೆ. ಗ್ರಾಮಾಂತರದ ಅಭ್ಯರ್ಥಿಗಳಿಗೆ ಊಟ, ವಸತಿ ಸೌಲಭ್ಯವಿದೆ. ಸಂಪರ್ಕಿಸಿ : 82173 52453

**ಸೈಟು ಮಾರಾಟಕ್ಕಿದೆ**
ಬನಶಂಕರಿ ಬಡಾವಣೆಯಲ್ಲಿ 60x30 ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ 96325 66170

**15 ದಿನಗಳಲ್ಲಿ ಪರಿಹಾರ**
ಬಿಪಿ, ಷುಗರ್, ಥೈರಾಯ್ಡ್, ಗ್ಯಾಸ್ಟ್ರಿಕ್, ವೆರಿಕೋಸ್, ವೈನ್ಸ್, ಮೈಗ್ರೇನ್, ತೂಕ ಇಳಿಕೆ, ನರಗಳ ಸೆಳೆತ, ಮಂಡಿ, ಬೆನ್ನು, ಸೊಂಟ, ಕುತ್ತಿಗೆ ನೋವುಗಳು ಹಲವು ಸಮಸ್ಯೆಗಳಿಗೆ ಪರಿಹಾರ. ಸಮಯ : ಬೆ: 9.00 ರಿಂದ 5:00 ರವರೆಗೆ ಗಂಗೋತ್ರಿ ವೆಲ್‌ನೆಸ್ ಸೆಂಟರ್ ಜಯದೇವ ಸರ್ಕಲ್, ದಾವಣಗೆರೆ. 86602 35013

**ಬೇಕಾಗಿದ್ದಾರೆ**
1) Computer Teachers (Ladies) - 6 No.s
2) Tailoring Teachers (Ladies) - 6 No.s
Quali ; Fashion Designing, PGDC (Diploma), BCA, JOC
ಆಸಕ್ತರು ಫೋಟೋ 2, ಆಧಾರ್ ಕಾರ್ಡ್, ಪಾನ್ ಕಾರ್ಡ್, ಮಾರ್ಕ್ಸ್ ಕಾರ್ಡ್ ಜೆರಾಕ್ಸ್ ನೊಂದಿಗೆ ಸಂಪರ್ಕಿಸಿ 73493 97287, 97417 46205 Whatsappನ ಮೂಲ ದಾಖಲೆ ಕಳುಹಿಸಿ ಎಸ್.ಎಸ್. ಪಬ್ಲಿಕ್ ಸ್ಕೂಲ್ Davangere/Harihar

**ಮಳಿಗೆ ಬಾಡಿಗೆಗೆ ಇದೆ**
ತ್ರಿಶೂಲ್ ಟಾಕೀಸ್ ರಸ್ತೆಯಲ್ಲಿ ಶ್ರೀ ಆದರ್ಶ ಶಾಮಿಯಾನ ಅಂಗಡಿಯ ಎದುರಿಗೆ ಇರುವ ಮಳಿಗೆ ಖಾಲಿ ಇದೆ. ಮಳಿಗೆ ಬಾಡಿಗೆಗೆ ಪಡೆಯಲು ಆಸಕ್ತಿಯುಳ್ಳವರು ಈ ಕೆಳಕಂಡ ನಂಬರ್‌ಗೆ ಸಂಪರ್ಕಿಸಿ : 99451 997770

**ಜಮೀನು ಮಾರಾಟಕ್ಕಿದೆ**
ಮಿಟ್ಲಕಟ್ಟೆ ಗ್ರಾಮದ ರಿ.ಸ.ನಂ.7/16 ರಲ್ಲಿ 17 ಗುಂಟೆ ಜಮೀನು ಮೇನ್ ರೋಡ್ ಪಕ್ಕ, ಮಿಟ್ಲಕಟ್ಟೆ ಶಾಮನೂರು ರಸ್ತೆ, ಶಾಮನೂರಿಂದ 3 ಕಿ.ಮೀ ಇದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ 87220 14318, 95352 69849

**ಸೈಟು ಬೇಕಾಗಿದೆ**
ಲೋಕಿಕೆರೆ ರೋಡ್ ನ್ಯೂ ಸರ್ ಎಂ.ವಿ. ಕಾಲೇಜ್ ಹತ್ತಿರ 30x40 ಉತ್ತರ ಅಥವಾ ಪೂರ್ವಕ್ಕೆ ಸೈಟ್ ಬೇಕಾಗಿದೆ. 98444 06587

**ಆಫೀಸ್/ಮನೆ ಕೆಲಸಕ್ಕೆ**
ಪಿಯುಸಿ ಪಾಸ್ ಆದ ಸದೃಢ ಸಸ್ಯಹಾರಿ ಯುವಕ ಆಫೀಸ್/ಮನೆ ಕೆಲಸ ನೋಡಿಕೊಳ್ಳಲು ಬೇಕಾಗಿದ್ದಾರೆ. ಉಚಿತ ಊಟ, ವಸತಿ. ಆಸಕ್ತರು ಸಂಪರ್ಕಿಸಿರಿ. ದಿವ್ಯಯೋಗ ಮಂದಿರ, ದಾವಣಗೆರೆ. 94827 31081

**ಬೇಕಾಗಿದ್ದಾರೆ**
ನೀರಿನ ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿರಿ : 88619 45934

**ಶ್ರೀ ದುರ್ಗಾಂಬಿಕ ಹೋಂ ಕೇರ್ ಸರ್ವೀಸ್**
ನಮ್ಮಲ್ಲಿ ವಯೋವೃದ್ಧರನ್ನು ನೋಡಿಕೊಳ್ಳಲು ಆಯಾಗಳನ್ನು ಕಳುಹಿಸುತ್ತೇವೆ. ವಯೋವೃದ್ಧರನ್ನು ನೋಡಿಕೊಳ್ಳಲು ಯುವಕ, ಯುವತಿಯರು ಬೇಕಾಗಿದ್ದಾರೆ. (ಊಟ, ವಸತಿ ವ್ಯವಸ್ಥೆ ಇರುತ್ತದೆ.) ಫೋ. : 96062 82814

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಸಿಮೆಂಟ್/ಬ್ರಿಕ್ ಮೋಲ್ಡಿಂಗ್ ಮಿಷಿನ್ ಮಾರಾಟಕ್ಕಿದೆ.**
1060 ಮಾಡೆಲ್ 93807 13883

**ಜಾಗ ಮಾರಾಟಕ್ಕಿದೆ**
ಪಿ.ಜೆ. ಬಡಾವಣೆ, 3ನೇ ಮುಖ್ಯರಸ್ತೆ, ಚೇತನ ಹೋಟೆಲ್ ಹತ್ತಿರ, 80×30 ಅಡಿ ಅಳತೆಯ ಜಾಗ ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ ಮೊ. : 97310 55765

**ಮನೆ ಬಾಡಿಗೆಗೆ ಇದೆ**
ಸಕಲ ಸೌಕರ್ಯವುಳ್ಳ ಉತ್ತರಕ್ಕೆ ಬಾಗಿಲಿರುವ ಮೊದಲನೇ ಮಹಡಿಯಲ್ಲಿ ಎರಡು ಬೆಡ್ ರೂಮ್ ಮನೆ ಬಾಡಿಗೆಗೆ ಇದೆ. #1859/34, 'ಭಾವ ಸಂಗಮ' LIC ಕಾಲೋನಿ, 4ನೇ ಮುಖ್ಯರಸ್ತೆ (ನೂತನ ಕಾಲೇಜ್ ಹಿಂಭಾಗ), ದಾವಣಗೆರೆ-4. 94487 46875

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ. ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2. 94481-59303, 94834 63783

**ಬೇಕಾಗಿದ್ದಾರೆ**
ದಾವಣಗೆರೆ ಸುತ್ತಮುತ್ತ ಸೆಕ್ಯೂರಿಟಿ, ರಿಸಪ್ಷನಿಸ್ಟ್ (Reception) ರೂಂ ಬಾಯ್, ಕ್ಲೀನರ್ ಬೇಕಾಗಿದ್ದಾರೆ. ಕೆಲವು ಕಡೆ ಊಟದ ವ್ಯವಸ್ಥೆ ಇರುತ್ತದೆ. ಆಕರ್ಷಕ ಸಂಬಳ. ಕೂಡಲೇ ಸಂಪರ್ಕಿಸಿ. ಮತ್ತು ಆಯಾ ಬೇಕಾಗಿದ್ದಾರೆ. 74113 07071, 98806 48207

**ಉದಯ ಸೂಪರ್ ಬಜಾರ್**
ಹದಡಿ ರಸ್ತೆ, ವಾಣಿ ರೈಸ್ ಮಿಲ್ ಕಾಂಪೌಂಡ್, ದಾವಣಗೆರೆ.
ಶೂ ಮತ್ತು ಚಪ್ಪಲಿಗಳ ಭರ್ಜರಿ ರಿಯಾಯಿತಿ ಮಾರಾಟ
ಚಿಕ್ಕಮಕ್ಕಳಿಗೆ 25%
ದೊಡ್ಡವರಿಗೆ 35%
ಸ್ಟಾಕ್ ಇರುವವರೆಗೆ ಮಾತ್ರ, ತ್ವರೆ ಮಾಡಿ

**GROUND FLOOR SPACE FOR RENT**
Suitable for Office/Clinic Behind Vishweshwariah Park, 4th Main, 9th Cross, P.J. Extension, Davangere. Mob. : 97429 75764 98862 35516

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿ ಕೆಲಸಕ್ಕೆ ಹುಡುಗರು/ಹುಡುಗಿಯರು ತಕ್ಷಣ ಬೇಕಾಗಿದ್ದಾರೆ. 94803 43063

**ಬೇಕಾಗಿದ್ದಾರೆ**
ಹೆಲ್ಪರ್ಸ್/ಸೇಲ್ಸ್‌ಗೆ ಹುಡುಗ/ಹುಡುಗಿಯರು ಬೇಕಾಗಿದ್ದಾರೆ. ನಾಗಣೇಚಿ ಕಟ್ ಫೀಸ್ ಸೆಂಟರ್ #19/1, ಕಾಳಿಕಾದೇವಿ ರೋಡ್, ದಾವಣಗೆರೆ-1. 81055 53341

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ. ತಿಂಗಳ ಕಂತು 10,000/- ದಿಂದ 6,500/- ಮಾತ್ರ ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02 84531 61869

**ಮಳಿಗೆ ಬಾಡಿಗೆಗೆ ಇದೆ**
ವಿದ್ಯಾರ್ಥಿ ಭವನದ ಹತ್ತಿರ, ಹದಡಿ ರೋಡ್ ದಾವಣಗೆರೆ. 84315 68521

**Trilok's Institute for Rehabilitating Unemployed & Under-Employed Davangere**
Conducting 2 months Course on film acting, 3 Months Course on Business Management Fees : 5000/- Per Month
91104 16055 www.tiruu.in

**ಮಾಂತ್ರಿಕ ಮೋಡಿ ಬೆಟ್ಟಪ್ಪ ನಂ.1 ವಶೀಕರಣ ಸ್ಪೆಷಲಿಸ್ಟ್**
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು 100% ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ. 89716 99826

**UPS BATTERY & RO PURIFIERS**
Sales & Service PEACE ENTERPRISES 83100 42490, 99013 18277 98801 56667

**ಪ್ರವೇಶ ಪ್ರಕಟಣೆ**
ಕರೆಸ್ಪಾಂಡೆನ್ಸ್/ ರೆಗ್ಯೂಲರ್ SSLC, PUC, BA, BCom, BSc, MA, MCom, MSc, MBA, All PG & Diploma Courses S.S. Global Institute for Higher Education, Davanagere. 63619 00533, 72593 59861

**ಸಾಲಗಳಿಗೆ ಸಂಪರ್ಕಿಸಿ**
(ಬಡ್ಡಿ ದರ ವಾರ್ಷಿಕ 7% ರಿಂದ ಪ್ರಾರಂಭ) ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಸಾಲ, ಬೇರೆ ಬ್ಯಾಂಕ್‌ನಲ್ಲಿ ತೆಗೆದುಕೊಂಡಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲಕ್ಕಾಗಿ ಸಂಪರ್ಕಿಸಿ. (ಸಂಬಳ ಮತ್ತು ವ್ಯವಹಾರದಾರರಿಗೆ ಮಾತ್ರ) 73385 80345

**SHOPS FOR RENT**
(with Wash Room Facility) N.R. Road, Davanagere. 94483 69523

# ಮಹಿಳೆಯರು ನೈಜ ಜೀವನದ ಸೂಪರ್ ಮಾಮ್ಸ್

## ಲೇಡಿಸ್ ಕ್ಲಬ್ ನ ಸೂಪರ್ ಮಾಮ್ಸ್ ಕಾರ್ಯಕ್ರಮದಲ್ಲಿ ಸಮಾಜ ಸೇವಕಿ ಹೇಮಾಕ್ಷಿ ಅಭಿಮತ



ದಾವಣಗೆರೆ, ಮಾ.25- ಮಹಿಳೆಯರು ನೈಜ ಜೀವನದ ಸೂಪರ್ ಮಾಮ್ಸ್ ಎಂದು ಧಾರವಾಡದ ಸಮಾಜ ಸೇವಕಿ ಹೇಮಾಕ್ಷಿ ಸಿ. ಕಿರೇಸೂರು ಅಭಿಪ್ರಾಯಪಟ್ಟರು.

ಅವರು, ಇಂದು ಸಂಜೆ ನಗರದ ಎಂಸಿಸಿ 'ಬಿ' ಬ್ಲಾಕ್‌ನ ಚಿಂದೋಡಿ ಲೀಲಾ ಕಲಾ ಕ್ಷೇತ್ರದಲ್ಲಿ ದಾವಣಗೆರೆ ಲೇಡಿಸ್ ಕ್ಲಬ್ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಸೂಪರ್ ಮಾಮ್ಸ್ ಕಾರ್ಯಕ್ರಮದಲ್ಲಿ ತೀರ್ಪುಗಾರರಾಗಿ ಭಾಗವಹಿಸಿ ಮಾತನಾಡಿದರು.

ಮಕ್ಕಳು, ಗಂಡ, ಅತ್ತೆ, ಮಾವ ಸೇರಿದಂತೆ ಕುಟುಂಬವನ್ನೇ ಸಂಬಾಳಿಸಲು ಸಶಕ್ತರಾಗಿರುವ ಮಹಿಳೆಯರಿಗೆ ಕಾರ್ಯಕ್ರಮದಲ್ಲಿ ಸೂಪರ್ ಮಾಮ್ಸ್ ಬಿರುದಿಗಿಂತ ಜೀವನದ ಪ್ರತಿಯೊಂದು ಘಟ್ಟದಲ್ಲೂ ನಮಗೆ ನಾವೇ ಸೂಪರ್ ಮಾಮ್ಸ್ ಆಗಿದ್ದೇವೆ. ಪ್ರತಿಯೊಬ್ಬ ಮಹಿಳೆಯರಲ್ಲಿ ಪ್ರತಿಭೆ ಇದೆ. ಏನೇ ಕಷ್ಟ ಬಂದರೂ ಸಹ ಎದೆ ಗುಂದದೆ ಆತ್ಮವಿಶ್ವಾಸದಿಂದ ಬದುಕಿನ ದಾರಿಯುದ್ದಕ್ಕೂ ನಡೆಯಬೇಕು ಎಂದು ತಿಳಿಸಿದರು.

ಆತ್ಮಸ್ಥೈರ್ಯ ತುಂಬುವ ಇಂತಹ ಸ್ಪರ್ಧೆಯಲ್ಲಿ ಸೋಲು-ಗೆಲುವು ಮುಖ್ಯವಲ್ಲ. ಭಾಗವಹಿಸುವಿಕೆ ಬಹುಮುಖ್ಯ. ಆತ್ಮವಿಶ್ವಾಸ ಇರಲಿ. ನೀವು ನೀವಾಗಿರಿ ಎಂದು ಮಹಿಳೆಯರಿಗೆ ಸಲಹೆ ನೀಡಿದರು.

ನಮ್ಮ ದೇಶ ಸಂಸ್ಕೃತಿ, ಸಂಸ್ಕಾರದ ತವರೂರು. ಈ ಸ್ಪರ್ಧೆಯಲ್ಲಿನ ವೇಷ-ಭೂಷಣಗಳು ನಮ್ಮ ಸಂಸ್ಕೃತಿ, ಸಂಸ್ಕಾರವನ್ನು ಪ್ರತಿಬಿಂಬಿಸುವ ಮುಖೇನ ಅವುಗಳನ್ನು ಎತ್ತಿ ಹಿಡಿಯಲಾಗುತ್ತಿದೆ. ಮಹಿಳೆಗೂ ಕೂಡ ಸ್ವಾತಂತ್ರ್ಯ, ಸಮಾನತೆಯ ಜೊತೆಗೆ ಪ್ರತಿಭೆಗೆ ತಕ್ಕಂತಹ ಅವಕಾಶವನ್ನು ದಾವಣಗೆರೆ ಲೇಡಿಸ್ ಕ್ಲಬ್ ನೀಡಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ನಗರ ಪಾಲಿಕೆ ಸದಸ್ಯೆ ವೀಣಾ ನಂಜಪ್ಪ ಮಾತನಾಡಿ, ಮಹಿಳೆಯರನ್ನು ಕೇವಲ ನಾಲ್ಕು ಗೋಡೆಗಳಿಗೆ ಸೀಮಿತವಾಗಿಸದೇ ಅವರಲ್ಲಿರುವ ಪ್ರತಿಭೆ, ಸಂಸ್ಕೃತಿ, ಕಲೆಗಳ ಅನಾವರಣಕ್ಕೆ ಈ ಕ್ಲಬ್ ಪ್ರೋತ್ಸಾಹಿಸುತ್ತಿರುವುದು ಪ್ರಶಂಸನೀಯ. ಮುಂದಿನ ದಿನಗಳಲ್ಲೂ ಇಂತಹ ಉತ್ತಮ ಕಾರ್ಯಕ್ರಮಗಳಲ್ಲಿ ನಾನು ಸಹ ಭಾಗವಹಿಸುತ್ತೇನೆಂದರು.

ಮತ್ತೋರ್ವ ತೀರ್ಪುಗಾರರಾದ ಶಶಿಕಲಾ ಡಿ. ಹೆಬ್ಬೇಕರ್ ಮಾತನಾಡಿ, ಜೀವನದಲ್ಲಿ ಏರು-ಪೇರುಗಳು ಸಹಜ. ಎದುರಾಗುವ ಸಮಸ್ಯೆಗಳಿಗೆ ಪರಿಹಾರ ಸಿಗಲಿದೆ. ಆದರೆ ಸಮಸ್ಯೆಗಳಿಗೆ ಹೆದರದೇ ಧೈರ್ಯವಾಗಿ ಮುನ್ನುಗ್ಗಬೇಕು. ಮಾನಸಿಕವಾಗಿ ಬಲಶಾಲಿಗಳಾಗಬೇಕು. ಆತ್ಮವಿಶ್ವಾಸ ಕುಗ್ಗಿಸಿಕೊಳ್ಳಬಾರದು. ನಾವು ಸಶಕ್ತರಾಗಿದ್ದಾಗ ಜೀವನದಲ್ಲಿ ಸೂಪರ್ ಮಾಮ್ಸ್ ಗಳಾಗಲು ಸಾಧ್ಯವೆಂದರು.

ಕ್ಲಬ್ ನ ಸಂಸ್ಥಾಪಕಿ ಅಮೀರಾ ಬಾನು ಪ್ರಾಸ್ತಾವಿಕವಾಗಿ ಮಾತನಾಡಿದರು. ಇದೇ ವೇಳೆ ಮಹಿಳಾ ಸಾಧಕಿಯರಾದ ಮಹಿಳಾ ಉದ್ಯಮಿ ಶಾರದ ರಾಯ್ಕರ್, ಅಂಗನವಾಡಿ ಶಿಕ್ಷಕಿ ರೇಣುಕಮ್ಮ, ಹಣ್ಣಿನ ವ್ಯಾಪಾರಿ ಕಾಮಾಕ್ಷಮ್ಮ, ಪಾರ್ವತಮ್ಮ ಅವರುಗಳನ್ನು ಸನ್ಮಾನಿಸಿ, ಗೌರವಿಸಲಾಯಿತು.

ಕ್ಲಬ್ ಅಧ್ಯಕ್ಷೆ ದಾಕ್ಷಾಯಿಣಿ ಅಂದಾನಪ್ಪ ಅಧ್ಯಕ್ಷತೆ ವಹಿಸಿದ್ದರು. ಕ್ಲಬ್ ನ ಸಾಂಸ್ಕೃತಿಕ ಕಾರ್ಯದರ್ಶಿ ಪದ್ಮ ಪ್ರಿಯ ರಾಘವೇಂದ್ರ, ಮಾಧ್ಯಮ ಪ್ರಮುಖರಾದ ಲಕ್ಷ್ಮಿ ಸತೀಶ್, ಕಾರ್ಯದರ್ಶಿ ಭಾಗ್ಯ ಪಿಸಾಳೆ, ಕೋಶಾಧ್ಯಕ್ಷೆ ಯಶೋಧ ಸುರೇಶ್, ಕೋ ಆರ್ಡಿನೇಟರ್ ಸಂಧ್ಯಾರಾಣಿ, ಉಪಾಧ್ಯಕ್ಷೆ ರಾಜೇಶ್ವರಿ, ಸಹ ಕಾರ್ಯದರ್ಶಿ ಸುಮ ಮಲ್ಲಿಕಾರ್ಜುನ್, ನಾಗರತ್ನ ಸೇರಿದಂತೆ ಇತರರು ಇದ್ದರು.

ಜಯಶೀಲ ಪ್ರಾರ್ಥಿಸಿದರು. ಕ್ಲಬ್ ನ ಪ್ರಧಾನ ಕಾರ್ಯದರ್ಶಿ ಚೇತನಾ ಶಿವಕುಮಾರ್ ನಿರೂಪಿಸಿದರು. ವಿನೋದ ಶೇಟ್ ಸ್ವಾಗತಿಸಿದರು.

**ತಾಯಂದಿರ ರ್‍ಯಾಂಪ್ ವಾಕ್:** ಈ ಸ್ಪರ್ಧೆಯಲ್ಲಿ ಯುವತಿಯರು, ತಾಯಂದಿರು ಸೇರಿ ಒಟ್ಟು 65ಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು. 35 ರಿಂದ 50, 50 ರಿಂದ 60, 50 ರಿಂದ 75 ವರ್ಷದ ತಾಯಂದಿರು, ಯುವತಿಯರು ನಾಚುವಂತೆ ಭಾರತೀಯ ಸಂಸ್ಕೃತಿ ಬಿಂಬಿಸುವ ಉಡುಗೆ-ತೊಡುಗೆಗಳನ್ನು ಧರಿಸಿ ರ್‍ಯಾಂಪ್ ವಾಕ್ ಮಾಡುತ್ತಾ ಗಮನ ಸೆಳೆದರು. ಯುವತಿಯರು ಸಹ ರ್‍ಯಾಂಪ್ ವಾಕ್ ಮಾಡಿದರು. ಯುವ ಸಮೂಹದ ನೃತ್ಯ, ಹಾಡು, ಗಿಟಾರ್ ವಾದನ ಹೀಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ನೋಡುಗರನ್ನು ಆಕರ್ಷಿಸಿದವು.

## ಇಂದು, ನಾಳೆ ಕಾರ್ಯಾಗಾರ

ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರ ವಿದ್ಯಾ ಮಂಡಳಿ ಬೆಂಗಳೂರು, ದಾವಣಗೆರೆ ವಿಜ್ಞಾನ ಕೇಂದ್ರ, ಸಾರ್ವಜನಿಕ ಶಿಕ್ಷಣ ಇಲಾಖೆ, ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ ಭೌತಶಾಸ್ತ್ರ, ರಸಾಯನಶಾಸ್ತ್ರ ವಿಭಾಗ ಇವರ ಸಂಯುಕ್ತಾಶ್ರಯದಲ್ಲಿ ಇಂದು ಮತ್ತು ನಾಳೆ ನಗರದ ಬಿಐಇಟಿ ಕಾಲೇಜಿನ ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ಸೆಮಿನಾರ್ ಹಾಲ್‌ನಲ್ಲಿ 'ವಿಜ್ಞಾನ ಶಿಕ್ಷಕರ ಕಾರ್ಯಾಗಾರ' ಹಮ್ಮಿಕೊಳ್ಳಲಾಗಿದೆ.

ಇಂದು ಬೆಳಿಗ್ಗೆ 10.30 ಕ್ಕೆ ನಡೆಯುವ ಉದ್ಘಾಟನಾ ಸಮಾರಂಭವನ್ನು ನೂತನ ಕಾಲೇಜಿನ ಪ್ರಾಂಶುಪಾಲ ಪ್ರೊ. ಎಸ್. ಹಾಲಪ್ಪ ನೆರವೇರಿಸಲಿದ್ದು, ಬಿಐಇಟಿ ಕಾಲೇಜಿನ ಪ್ರಾಚಾರ್ಯ ಡಾ|| ಹೆಚ್.ಬಿ. ಅರವಿಂದ್ ಅಧ್ಯಕ್ಷತೆ ವಹಿಸಲಿದ್ದು, ಡಯಟ್ ಕಾಲೇಜು ಉಪನಿರ್ದೇಶಕ (ಅಭಿವೃದ್ಧಿ) ಹೆಚ್.ಕೆ. ಲಿಂಗರಾಜು ಮುಖ್ಯಅತಿಥಿಯಾಗಿ ಭಾಗವಹಿಸಲಿದ್ದಾರೆ. ಪ್ರಾಧ್ಯಾಪಕ ಡಾ|| ಬಿ.ಇ. ಬಸವರಾಜಪ್ಪ, ವಿಜ್ಞಾನ ವಿಷಯ ಪರಿವೀಕ್ಷಕ ಆರ್.ಬಿ. ವಸಂತಕುಮಾರಿ ಉಪಸ್ಥಿತರಿರುವರು.

ನಾಳೆ ಮಧ್ಯಾಹ್ನ 3.30 ಕ್ಕೆ ಸಮಾರೋಪ ಸಮಾರಂಭ ನಡೆಯಲಿದ್ದು, ಬಿಐಇಟಿ ಕಾಲೇಜಿನ ನಿರ್ದೇಶಕ ಪ್ರೊ|| ವೈ. ವೃಷಭೇಂದ್ರಪ್ಪ ಅಧ್ಯಕ್ಷತೆ ವಹಿಸಲಿದ್ದು, ಧ.ರಾ.ಮ ವಿಜ್ಞಾನ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಪ್ರೊ|| ಹೆಚ್.ಬಿ. ಶಿವಣ್ಣ ಸಮಾರೋಪ ನುಡಿಯಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶಿಕ್ಷಣಾಧಿಕಾರಿ ಜಗದೀಶ್ವರ, ಎಂ. ಮಂಜುನಾಥ ಸ್ವಾಮಿ, ಪ್ರಾಧ್ಯಾಪಕಿ ವಿ.ಕೆ. ಗೀತ ಪಾಲ್ಗೊಳ್ಳಲಿದ್ದಾರೆ. ಸಂಪನ್ಮೂಲ ವ್ಯಕ್ತಿಗಳಾಗಿ ನಿವೃತ್ತ ಪ್ರಾಚಾರ್ಯ ಪ್ರೊ. ಬಿ. ಶಿವಾನಂದ, ಮೈಸೂರು, ಧಾರವಾಡದ ನಿವೃತ್ತ ಶಿಕ್ಷಕರಾದ ಹೆಚ್. ಎಲ್.ಸತೀಶ್, ಸುರೇಶ್ ಮತ್ತು ಸುರೇಶ್ ಕುಲಕರ್ಣಿ ಭಾಗವಹಿಸಲಿದ್ದಾರೆ.

## ನಾಳೆ ಮೆಗಾ ಲೋಕ್ ಅದಾಲತ್

ದಾವಣಗೆರೆ, ಮಾ.25- ಇದೇ 27 ರಂದು ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರದಿಂದ ಮೆಗಾ ಲೋಕ್ ಅದಾಲತ್ ಆಯೋಜಿಸಲಾಗಿದೆ.

ಈ ಅದಾಲತ್‌ನಲ್ಲಿ ನ್ಯಾಯಾಲಯಗಳಲ್ಲಿ ಪೆಂಡಿಂಗ್ ಇರುವ ಹಾಗೂ ಇನ್ನೂ ದಾಖಲು ಮಾಡದೇ ಇರುವ ರಾಜೀಯಾಗುವಂತಹ ಎಲ್ಲಾ ಪ್ರಕರಣಗಳಲ್ಲಿ ಉಭಯ ಪಕ್ಷಗಾರರು ಹಾಜರಾಗಿ ತಮ್ಮ ತಮ್ಮ ಪ್ರಕರಣಗಳನ್ನು ಇತ್ಯರ್ಥ ಪಡಿಸಿಕೊಳ್ಳಬಹುದಾಗಿದೆ.

ಅದಾಲತ್‌ನಲ್ಲಿ ಎಂ.ವಿ.ಸಿ. ಪಾಲುವಿಭಾಗ, ಹಣಪಾವತಿ ದಾವೆಗಳು, ಹೆಚ್.ಆರ್.ಸಿ ಪ್ರಕರಣಗಳ ಹಾಗೂ ಇತರೆ ಸಿವಿಲ್ ದಾವೆಗಳು ಹಾಗೂ ಚೆಕ್ ಬೌನ್ಸ್ ಪ್ರಕರಣಗಳು, ಜೀವನಾಂಶದ ಅರ್ಜಿ ಪ್ರಕರಣಗಳು, ಕೌಟುಂಬಿಕ (ವಿಚ್ಛೇದನವನ್ನು ಹೊರತು ಪಡಿಸಿ) ಕಲಹಗಳ ಹಾಗೂ ವ್ಯಾಜ್ಯ ಪೂರ್ವ ಪ್ರಕರಣಗಳನ್ನು ಇತ್ಯರ್ಥ ಪಡಿಸಿಕೊಳ್ಳಬಹುದು ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷರಾದ ಗೀತಾ.ಕೆ.ಬಿ ಮತ್ತು ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಪ್ರವೀಣ್ ನಾಯಕ್ ತಿಳಿಸಿದ್ದಾರೆ.



## ತಾರೇಹಳ್ಳಿಯಲ್ಲಿ ಲಕ್ಷ್ಮಿರಂಗನಾಥ ಸ್ವಾಮಿ ರಥೋತ್ಸವ

ಜಗಳೂರು ತಾಲ್ಲೂಕಿನ ತಾರೇಹಳ್ಳಿ ಗ್ರಾಮದಲ್ಲಿ ಲಕ್ಷ್ಮಿ ರಂಗನಾಥ ಸ್ವಾಮಿ ರಥೋತ್ಸವ ಬುಧವಾರ ಸರಳವಾಗಿ ನೆರವೇರಿತು.

## ಜಿಗಳಿ: ಇಂದು ರಂಗನಾಥ ಸ್ವಾಮಿ ರಥೋತ್ಸವ



ಮಲೇಬೆನ್ನೂರು ಸಮೀಪದ ಜಿಗಳಿ ಗ್ರಾಮದ ಆರಾಧ್ಯ ದೈವ ಶ್ರೀ ರಂಗನಾಥ ಸ್ವಾಮಿಯ ರಥೋತ್ಸವವು ಇಂದು ತಡರಾತ್ರಿ ಜರುಗಲಿದೆ.

ಇಂದು ಬೆಳಿಗ್ಗೆ 8 ಗಂಟೆಗೆ ಗಜ ಉತ್ಸವ ನಡೆಯಲಿದ್ದು, ಸಂಜೆ 4 ಗಂಟೆಯಿಂದ ಶಸ್ತ್ರ ಕಾರ್ಯಕ್ರಮಗಳು ಜರುಗಲಿವೆ. ಇದೇ ದಿನ ತಡರಾತ್ರಿ (ಶನಿವಾರ ಬೆಳಗಿನ ಜಾವ) ಶ್ರೀ ರಂಗನಾಥ ಸ್ವಾಮಿಯ ರಥೋತ್ಸವವು ಯಲವಟ್ಟಿಯ ಶ್ರೀ ಆಂಜನೇಯ ಸ್ವಾಮಿ, ಜಿ. ಬೇವಿನಹಳ್ಳಿಯ ಶ್ರೀ ಆಂಜನೇಯ ಸ್ವಾಮಿ ಹಾಗೂ ಗ್ರಾಮದ ಶ್ರೀ ಬೀರಲಿಂಗೇಶ್ವರ ದೇವರ ಒಡಗೂಡಿ ಸಕಲ ಬಿರುದಾವಳಿಗಳೊಂದಿಗೆ ನಡೆಯಲಿದೆ.

27 ರ ಶನಿವಾರ ಬೆಳಿಗ್ಗೆ 10.30 ರಿಂದ ದೇವಸ್ಥಾನದಲ್ಲಿ ಜವಳ, ಮುದ್ರೆ ಇತ್ಯಾದಿ ಸೇವಾ ಕಾರ್ಯಕ್ರಮಗಳು ನಡೆಯುವವು. ಸಂಜೆ ಓಕಳಿ ನಂತರ ಕಂಕಣ ವಿಸರ್ಜನೆ ಮಾಡಲಾಗುವುದು. 28ರ ಭಾನುವಾರ ಬೆಳಿಗ್ಗೆ ವಿವಿಧ ಕಾರ್ಯಕ್ರಮಗಳ ನಂತರ ಸಂಜೆ 7.30 ಕ್ಕೆ ಶ್ರೀ ರಂಗನಾಥ ಸ್ವಾಮಿ ಸೇರಿದಂತೆ ಎಲ್ಲಾ ದೇವರುಗಳ ಸಮ್ಮುಖದಲ್ಲಿ ಭೂತನ ಸೇವೆ ಮತ್ತು ರಾಜ ಬೀದಿಗಳಲ್ಲಿ ದೇವರುಗಳ ಮೆರವಣಿಗೆ ನಡೆಯುವುದು. 30 ರ ಮಂಗಳವಾರ ಶ್ರೀ ಚೌಡಮ್ಮದೇವಿ ಹಬ್ಬ ನಡೆಯಲಿದೆ.



## ವಿಜೃಂಭಣೆಯ ಉರ್ಲುಕಟ್ಟೆ ಬಸವೇಶ್ವರ ಸ್ವಾಮಿ ತೇರು

ಜಗಳೂರು, ಮಾ.25- ತಾಲ್ಲೂಕಿನ ಉರ್ಲುಕಟ್ಟೆ ಗ್ರಾಮದಲ್ಲಿ ಶ್ರೀ ಬಸವೇಶ್ವರ ಸ್ವಾಮಿಯ ಮಹಾರಥೋತ್ಸವ ಗುರುವಾರ ಸಂಜೆ ವಿಜೃಂಭಣೆಯಿಂದ ಜರುಗಿತು.

ದಾವಣಗೆರೆ, ಚಿತ್ರದುರ್ಗ ಸೇರಿದಂತೆ ವಿವಿಧ ತಾಲ್ಲೂಕುಗಳಿಂದ ಆಗಮಿಸಿದ್ದ ಭಕ್ತರು ರಥೋತ್ಸವದ ಗಾಲಿಗೆ ಕಾಯಿ ಒಡೆದು, ಕಳಸ ಹಾಗೂ ರಥೋತ್ಸವಕ್ಕೆ ಬಾಳೆ ಹಣ್ಣು ಎಸೆಯುತ್ತಿದ್ದಂತೆ ಶ್ರೀ ಬಸವೇಶ್ವರ ಸ್ವಾಮಿಯ ಘೋಷಣೆಯೊಂದಿಗೆ ರಥೋತ್ಸವ ವಿಜೃಂಭಣೆಯಿಂದ ಜರುಗಿತು. ಇದೇ ವೇಳೆ ಉರ್ಲುಕಟ್ಟೆ ಗ್ರಾಮದ ಶಾಂತವೀರಸ್ವಾಮಿ ಅವರು 1.15 ಲಕ್ಷ ರೂ. ಗಳಿಗೆ ಶ್ರೀ ಬಸವೇಶ್ವರ ಸ್ವಾಮಿಯ ಬಾವುಟವನ್ನು ಹರಾಜಿನಲ್ಲಿ ಪಡೆದುಕೊಂಡರು.

ಗ್ರಾಮದ ಗುಡ್ಡದ ಮೇಲೆ ಉದ್ಭವವಾಗಿರುವ ಬಸವಣ್ಣನ ಮೂರ್ತಿಗೆ ಅಪಾರ ಭಕ್ತರು ಪೂಜೆ ಸಲ್ಲಿಸಿದರು. ಈ ಸಂದರ್ಭದಲ್ಲಿ ದಾವಣಗೆರೆ ಮಹಾನಗರ ಪಾಲಿಕೆ ಮೇಯರ್ ಎಸ್.ಟಿ. ವೀರೇಶ್, ದಿದ್ದಿಗಿ ಗ್ರಾ.ಪಂ ಅಧ್ಯಕ್ಷರು, ಸದಸ್ಯರುಗಳು, ಚುನಾಯಿತ ಪ್ರತಿನಿಧಿಗಳು, ಶ್ರೀ ಬಸವೇಶ್ವರ ದೇವಸ್ಥಾನ ಸಮಿತಿ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಮುಖಂಡರು ಉಪಸ್ಥಿತರಿದ್ದರು.

## ಬಸವನಾಳ್ ಗೊಲ್ಲರಹಟ್ಟಿಯಲ್ಲಿ ಇಂದಿನಿಂದ ಚೌಡೇಶ್ವರಿ ದೇವಿಯ ಆರಾಧನಾ ಮಹೋತ್ಸವ

ದಾವಣಗೆರೆ ತಾಲ್ಲೂಕಿನ ಬಸವನಾಳ್ ಗೊಲ್ಲರಹಟ್ಟಿ ಗ್ರಾಮದಲ್ಲಿ ಇಂದು ಮತ್ತು ನಾಳೆ ಎರಡು ದಿನಗಳ ಕಾಲ ಶ್ರಿ ಚೌಡೇಶ್ವರಿ ದೇವಿಯ ಆರಾಧನಾ ಮಹೋತ್ಸವ ಜರುಗಲಿದೆ. ಇಂದು ಸಂಜೆ 4 ರಿಂದ 5 ರವರೆಗೆ ಶ್ರೀ ಪಾರ್ಥಲಿಂಗೇಶ್ವರ ಸ್ವಾಮಿ ಮತ್ತು ಶ್ರೀ ಚೌಡೇಶ್ವರಿ ದೇವಿಗೆ ಹೊಳೆಯಲ್ಲಿ ಗಂಗಾ ಪೂಜೆ ನಡೆಯಲಿದೆ. ರಾತ್ರಿ 9 ರಿಂದ ಗೊಲ್ಲರಹಟ್ಟಿ ನರಹರಿ ಭಕ್ತರಿಂದ ಭಜನಾ ಕಾರ್ಯಕ್ರಮ, ರಾತ್ರಿ 12 ರಿಂದ ಬಿಳಿಚೋಡು ಅಂಜಿನಪ್ಪ ಸ್ವಾಮೀಜಿ ಹಾಗೂ ತುರುವನೂರು ನಿಂಗಪ್ಪ ಸ್ವಾಮೀಜಿ ಅವರಿಂದ ಪ್ರವಚನ ಏರ್ಪಡಿಸಲಾಗಿದೆ.

ನಾಳೆ ದಿನಾಂಕ 27ರ ಬೆಳಿಗ್ಗೆ 5 ರಿಂದ 8 ರವರೆಗೆ ಶ್ರೀ ದೇವಿಗೆ ಅಭಿಷೇಕ, 9 ರಿಂದ 10 ಅಗ್ನಿಕುಂಡ, ಬೇವು ಉಡುವುದು, ಜವಳ, ಹರಕೆ, ತುಲಾಭಾರ ನಡೆಯಲಿದೆ.

## ನಾಳೆ ವಿಶ್ವ ರಂಗಭೂಮಿ ದಿನಾಚರಣೆ

ದಾವಣಗೆರೆ, ಮಾ.25 - ಕರ್ನಾಟಕ ನಾಟಕ ಅಕಾಡೆಮಿ ಮತ್ತು ಭೂಮಿಕಾ-ವನಿತಾ ರಂಗವೇದಿಕೆ ಇವರ ಸಂಯುಕ್ತಾಶ್ರಯದಲ್ಲಿ ನಾಡಿದ್ದು ದಿನಾಂಕ 27 ರಂದು ಸಂಜೆ 6:30ಕ್ಕೆ ನಗರದ ವನಿತಾ ಸಮಾಜದಲ್ಲಿ ವಿಶ್ವ ರಂಗಭೂಮಿ ದಿನಾಚರಣೆ ಹಮ್ಮಿಕೊಳ್ಳಲಾಗಿದೆ.

ವನಿತಾ ಸಮಾಜದ ಗೌರವಾಧ್ಯಕ್ಷರು, ಮಾಜಿ ಸಚಿವೆ ಡಾ. ನಾಗಮ್ಮ ಕೇಶವಮೂರ್ತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ನಾಟಕ ಅಕಾಡೆಮಿ ಸದಸ್ಯ, ಕಲಾವಿದ ರವೀಂದ್ರ ಅರಳಗುಪ್ಪಿ, ಹಿರಿಯ ರಂಗಕರ್ಮಿ ಬಾ.ಮ. ಬಸವರಾಜಯ್ಯ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ರಂಗ ವೇದಿಕೆಯ ಕಾರ್ಯದರ್ಶಿ ಬಿ.ಟಿ. ಜಾಹ್ನವಿ, ಉಪಾಧ್ಯಕ್ಷೆ ಸತ್ಯಭಾಮ ಮಂಜುನಾಥ್, ಖಜಾಂಚಿ ಹೆಚ್.ಎಸ್. ಸುಧಾ ಉಪಸ್ಥಿತರಿರುವರು ಎಂದು ಬಿ.ಟಿ. ಜಾಹ್ನವಿ ತಿಳಿಸಿದ್ದಾರೆ.

## ನಗರಕ್ಕೆ ಇಂದು ಕಜಂಪಾಡಿ ಸುಬ್ರಹ್ಮಣ್ಯ ಭಟ್

ಕುಟುಂಬ ಪ್ರಬೋಧನ್ ರಾಷ್ಟ್ರೀಯ ಸಂಯೋಜಕ ಕಜಂಪಾಡಿ ಸುಬ್ರಹ್ಮಣ್ಯ ಭಟ್ ಅವರು ಇಂದು ನಗರಕ್ಕೆ ಆಗಮಿಸಲಿದ್ದಾರೆ. ಅಖಿಲ ಭಾರತೀಯ ಅಧಿವ್ಯಕ್ತ ಪರಿಷತ್ ಹಾಗೂ ಕುಟುಂಬ ಪ್ರಬೋಧನ್ ಇವರ ಜಂಟಿ ಆಶ್ರಯದಲ್ಲಿ ಸಂಜೆ 6 ಗಂಟೆಗೆ ನಿಟುವಳ್ಳಿಯ ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದಲ್ಲಿ 'ಕುಟುಂಬ ಮಿಲನ್' ಕಾರ್ಯಕ್ರಮದಲ್ಲಿ ಅವರು ಪಾಲ್ಗೊಳ್ಳುವರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅಭಿವ್ಯಕ್ತ ಪರಿಷತ್ ಅಧ್ಯಕ್ಷ ಎಲ್. ದಯಾನಂದ್ ವಹಿಸುವರು ಎಂದು ಕುಟುಂಬ ಪ್ರಬೋಧನ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಿ. ವಸಂತಕುಮಾರ್ ತಿಳಿಸಿದ್ದಾರೆ.

## ಇಂದು 'ಮಹಾ ಭಾರತ ಪದ್ಮವ್ಯೂಹ' ನಾಟಕ



ಗ್ರಂಥ ಸರಸ್ವತಿ ಪ್ರತಿಭಾರಂಗ, ದಾವಣಗೆರೆ ಇವರು ಆಯೋಜಿಸಿರುವ ಥಿಯೇಟರ್ ಸಮುರಾಯ್, ಪುರಪ್ಪೆಮನೆ ಅಭಿನಯದ ವಾಮನ ಮಾಸ್ತರರ 'ವೀರ ಅಭಿಮನ್ಯು' ಆಧಾರಿತ 'ಮಹಾ ಭಾರತ ಪದ್ಮವ್ಯೂಹ' ನಾಟಕ ಇಂದು ಸಂಜೆ 7ಕ್ಕೆ ವಿದ್ಯಾನಗರ ಉದ್ಯಾನವನದ ಕಾವ್ಯ ಮಂಟಪದಲ್ಲಿ ಪ್ರದರ್ಶನಗೊಳ್ಳಲಿದೆ.

ಪ್ರವೇಶ ಉಚಿತವಾಗಿದ್ದು, ರಂಗಾಸಕ್ತರು ಆಗಮಿಸುವಂತೆ ಗ್ರಂಥ ಸರಸ್ವತಿ ಪ್ರತಿಭಾ ರಂಗದ ಅಧ್ಯಕ್ಷ ಶಿವಕುಮಾರ ಸ್ವಾಮಿ ಕುರ್ಕಿ ಕೋರಿದ್ದಾರೆ.

## ಹರಿಹರ: ಮಾಸ್ಕ್ ಧರಿಸದವರಿಗೆ ದಂಡ




ಹರಿಹರ, ಮಾ.25- ನಗರಸಭೆಯ ಅಧಿಕಾರಿಗಳ ನೇತೃತ್ವದಲ್ಲಿ ಸರ್ಕಾರದ ನಿರ್ದೇಶನದಂತೆ ಪಿ.ಬಿ. ರಸ್ತೆಯಲ್ಲಿರುವ ಮೋರ್ ಮತ್ತು ಜಿ-7 ಮಳಿಗೆಗಳಲ್ಲಿ ಮಾಸ್ಕ್ ಧರಿಸದೇ ಇರುವ ಸಂಬಂಧ ದಂಡ ವಿಧಿಸಲಾಯಿತು.

ನಗರಸಭೆಯ ಕಚೇರಿ ವ್ಯವಸ್ಥಾಪಕ ಜಿ.ಹೆಚ್. ವೀರಾಪುರ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರ (ಪರಿಸರ) ಸಿ.ಹೆಚ್. ತಿಮ್ಮಪ್ಪ ಅವರ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಜಿ-7 ನಲ್ಲಿ ನಿಷೇಧಿತ ಪ್ಲಾಸ್ಟಿಕ್ ಬಳಕೆ ಪತ್ತೆ ಹಚ್ಚಿ ರೈಡ್ ಮಾಡಲಾಯಿತು. ಜಯಶ್ರೀ ಚಿತ್ರಮಂದಿರದಲ್ಲಿ ಮಾಸ್ಕ್ ಧರಿಸದಿರುವ ಹಾಗೂ ಗುಟ್ಕಾ ಉಗುಳಿರುವುದನ್ನು ಪರಿಶೀಲಿಸಿ ಸ್ವಚ್ಛತೆ ಕಾಪಾಡಿಕೊಳ್ಳುವಂತೆ ಹಾಗೂ ಮಾಸ್ಕ್ ಕಡ್ಡಾಯ ಮಾಡುವಂತೆ ತಿಳಿಸಿ, ದಂಡ ವಿಧಿಸಲಾಯಿತು.

ಈ ಸಂದರ್ಭದಲ್ಲಿ ಪ್ರಥಮ ದರ್ಜೆ ಸಹಾಯಕ ಹೆಚ್. ತಿಪ್ಪೇಸ್ವಾಮಿ, ಎ. ನಸರುಲ್ಲಾ, ದ್ವಿತೀಯ ದರ್ಜೆ ಸಹಾಯಕ ಬಿ.ಕೆ. ಅಸ್ಲಾಂ, ರಾಮಕುಮಾರ್ ಕೊಂಡಜ್ಜಿ, ಆರ್.ಎಂ. ವಿನಯಕುಮಾರ್ ಮತ್ತು ಎಸ್. ಮಂಜುನಾಥ್, ಎಸ್. ಉಷಾ, ಸೌಭಾಗ್ಯ, ದಫೇದಾರ್ ಹನುಮಂತ ಹಾಜರಿದ್ದರು.

## ಎಪಿಎಂಸಿ ಸದಸ್ಯರಾಗಿ ಬಸವರಾಜ್



ಹೊನ್ನಾಳಿ, ಮಾ.25- ತಾಲ್ಲೂಕಿನ ಸಹಕಾರ ಮಾರುಕಟ್ಟೆ ವ್ಯವಹಾರ ಸಂಘಗಳ ಕ್ಷೇತ್ರದಿಂದ ಹೊನ್ನಾಳಿ ಎಪಿಎಂಸಿ ಸದಸ್ಯರಾಗಿ ಕಾಯಿ ಬಸವರಾಜ್ ಚುನಾಯಿತರಾಗಿದ್ದು, ತಹಶೀಲ್ದಾರ್ ಬಸವನಗೌಡ ಕೋಟೂರ ಆಯ್ಕೆ ಪ್ರಮಾಣ ಪತ್ರ ವಿತರಿಸಿದರು.

## ರೈತ ವಿರೋಧಿ ನೀತಿ ಖಂಡಿಸಿ ಇಂದಿನ ಬಂದ್ ಗೆ ಬೆಂಬಲ

ಕೇಂದ್ರ ಸರ್ಕಾರ ರೈತರಿಗೆ ಮಾರಕವಾಗುವ 3 ಕಾಯ್ದೆಗಳನ್ನು ಜಾರಿಗೊಳಿಸುವುದನ್ನು ವಿರೋಧಿಸಿ, ಅಖಿಲ ಭಾರತ ರೈತ ಸಂಘರ್ಷ ಸಮನ್ವಯ ಸಮಿತಿ ಕರೆ ಕೊಟ್ಟಿರುವ ಇಂದಿನ ಬಂದ್‌ಗೆ ಸಿಪಿಐ, ಎಐಟಿಯುಸಿ, ಎಐಕೆಎಸ್, ಎಐವೈಎಸ್ ಸಂಘಟನೆಗಳು ಸಂಪೂರ್ಣ ಬೆಂಬಲ ವ್ಯಕ್ತಪಡಿಸಿವೆ. ಸಂಘಟನೆಗಳ ಮುಖಂಡರಾದ ಹೆಚ್.ಕೆ. ರಾಮಚಂದ್ರಪ್ಪ, ಆವರಗೆರೆ ವಾಸು, ಆನಂದರಾಜ್, ಹೆಚ್.ಜಿ. ಉಮೇಶ್, ಆವರಗೆರೆ ಚಂದ್ರು, ಎನ್.ಟಿ. ಬಸವರಾಜ್, ಟಿ.ಎಸ್. ನಾಗರಾಜ್, ಕೆರೆನಹಳ್ಳಿ ರಾಜು, ಐರಣಿ ಚಂದ್ರು, ನರೇಗ ರಂಗನಾಥ್, ವಿ. ಲಕ್ಷ್ಮಣ, ಎಂ.ಬಿ. ಶಾರದಮ್ಮ, ಸಿ. ರಮೇಶ್, ಎನ್.ಹೆಚ್. ರಾಮಣ್ಣ, ಮಹ್ಮದ್ ಬಾಷಾ, ಮಹ್ಮದ್ ರಫೀಕ್, ದಾದಾಪೀರ್, ಶಿವಮೂರ್ತಿ, ಯಲ್ಲಪ್ಪ ಅವರುಗಳು ಬೆಂಬಲಿಸಿ ಬಂದ್‌ನಲ್ಲಿ ಭಾಗವಹಿಸಲಿದ್ದಾರೆ.


## ಮೂಲ ನಿವೇಶನ ಮಂಜೂರಿ ಪತ್ರ ಕಳೆದಿದೆ

ನಾನು **ಶ್ರೀಮತಿ ಗೀತಾ ಕೋಂ ಗುರುರಾಜಾಚಾರ್**, ವಯಸ್ಸು 65 ವರ್ಷ, ವಾಸ : #1252/ಎ2/8 2ನೇ ಹಂತ, ಶಿವಕುಮಾರಸ್ವಾಮಿ ಬಡಾವಣೆ ವಾಸಿಯಾದ ನಾನು ದೇವರ ಹೆಸರಿನಲ್ಲಿ ಪ್ರಮಾಣ ಮಾಡಿ ಹೇಳುವುದೇನೆಂದರೆ, ನಾನು ಈ ಕೆಳಕಂಡ ವಿಳಾಸದಲ್ಲಿ ವಾಸವಾಗಿರುತ್ತೇನೆ, **ಶ್ರೀ ರಾಜಪ್ಪ ಬಿನ್ ಕರೇಗೌಡಪ್ಪ** ಹೆಸರಿನಲ್ಲಿ ದಾವಣಗೆರೆ ತಾ||, ಶಿರಮಗೊಂಡನಹಳ್ಳಿ ಗ್ರಾಮ ಪಂಚಾಯಿತಿಗೆ ಒಳಪಟ್ಟ ಶಿರಮಗೊಂಡನಹಳ್ಳಿ ಗ್ರಾಮದಲ್ಲಿ ಬರತಕ್ಕ ರಿ. **ಸರ್ವೆ ನಂ 57 ಮತ್ತು 62,** ನಿವೇಶನ ನಂ. **146,** ಅಳತೆ **60x40** ಅಡಿವುಳ್ಳ ನಿವೇಶನದ ಮೂಲ ನಿವೇಶನದ ಮಂಜೂರಿ ಸರ್ಟೀಫಿಕೇಟ್ ಇರುತ್ತದೆ. ಸದರಿ ಸೊತ್ತಿಗೆ ಚಕ್ಕುಬಂದಿ:- **ಪೂರ್ವಕ್ಕೆ** : ರಸ್ತೆ, **ಪಶ್ಚಿಮಕ್ಕೆ:** 129 ನೇ ಸೈಟು, **ಉತ್ತರಕ್ಕೆ:** 147ನೇ ಸೈಟ್, **ದಕ್ಷಿಣಕ್ಕೆ** : 145ನೇ ಸೈಟು ಈ ಮಧ್ಯದ ಸೊತ್ತು. ಈ ಸೊತ್ತನ್ನು ನಾನು ಈ ಹಿಂದೆ ಖರೀದಿ ಮಾಡಿ ಸದರಿ ಪತ್ರವನ್ನು ನನ್ನ ವಶಕ್ಕೆ ಪಡೆದಿರುತ್ತೇನೆ. ಆದರೆ ಸದರಿ ಮೇಲ್ಕಂಡ ಮೂಲ ನಿವೇಶನ ಮಂಜೂರಿ ಸರ್ಟಿಫಿಕೇಟ್ ದಿನಾಂಕ : 10.03.2021 ರಂದು ಬೆಳಿಗ್ಗೆ : 10.30 ರ ಸಮಯದಲ್ಲಿ ಮೇಲ್ಕಂಡ ವಿಳಾಸದ ವಾಸದ ಮನೆಯನ್ನು ಸ್ವಚ್ಛ ಮಾಡುವಾಗ ಆಕಸ್ಮಿಕವಾಗಿ ನಿವೇಶನ ಮಂಜೂರಿ ಸರ್ಟಿಫಿಕೇಟ್ ಕಳೆದು ಹೋಗಿರುತ್ತದೆ. ಸದರಿ ಮೇಲ್ಕಂಡ ನಿವೇಶನ ಮಂಜೂರಿ ಸರ್ಟಿಫಿಕೇಟ್‌ನ್ನು ನಾನು ಸಾಕಷ್ಟು ಹುಡುಕಲಾಗಿ, ಅದು ನನಗೆ ಇಲ್ಲಿಯವರೆಗೂ ಸಿಕ್ಕಿರುವುದಿಲ್ಲ ಮೇಲ್ಕಂಡ ನಿವೇಶನ ಮಂಜೂರಿ ಸರ್ಟಿಫಿಕೇಟ್‌ನ್ನು ಬೇರೆ ಯಾರಿಗೂ ಕೊಟ್ಟಿರುವುದಿಲ್ಲವೆಂದು ಹಾಗೂ ಯಾವುದೇ ಬ್ಯಾಂಕಿನಲ್ಲಿ ಅಡಮಾನವಾಗಿ ಇಟ್ಟಿರುವುದಿಲ್ಲವೆಂದು ಈ ಪ್ರಮಾನ ಪತ್ರದ ಮೂಲಕ ಪ್ರಮಾಣೀಕರಿಸುತ್ತೇನೆ. ಒಂದು ವೇಳೆ ಸದರಿ ಮೇಲ್ಕಂಡ ಮೂಲ ನಿವೇಶನ ಮಂಜೂರಿ ಸರ್ಟಿಫಿಕೇಟ್ ಸಿಕ್ಕಲ್ಲಿ ಅದನ್ನು ದುರುಪಯೋಗ ಪಡಿಸಿ ಕೊಳ್ಳುವುದಿಲ್ಲವೆಂದು ಒಪ್ಪಿ ಈ ಕೆಳಗೆ ನನ್ನ ಸಹಿ ಮಾಡಿರುತ್ತೇನೆ ಹಾಗೂ ನನ್ನ ಹತ್ತಿರ ಯಾವುದೇ ಮೂಲ ಪ್ರತಿ ಇರುವುದಿಲ್ಲ. ಜೆರಾಕ್ಸ್ ಪ್ರತಿ ಮಾತ್ರ ಇರುತ್ತದೆಂದು ಪ್ರಮಾಣೀಕರಿಸುತ್ತೇನೆ.

ಆದ್ದರಿಂದ ನನಗೆ ಮೇಲ್ಕಂಡ ಮೂಲ ನಿವೇಶನ ಮಂಜೂರಿ ಸರ್ಟಿಫಿಕೇಟ್ ಅವಶ್ಯಕತೆ ಇರುವುದರಿಂದ ಈ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಸಲ್ಲಿಸಲು ಮಾಡಿಸಿರುತ್ತೇನೆ. ಈ ಮೇಲ್ಕಂಡ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆಂದು ದಾವಣಗೆರೆ ನೋಟರಿ ಅವರ ಮುಂದೆ ಪ್ರಮಾಣೀಕರಿಸುತ್ತೇನೆ.

ದಿನಾಂಕ: 25.03.2021
ಸ್ಥಳ : ದಾವಣಗೆರೆ.

**ಗೀತಾ ಕೋಂ ಗುರುರಾಜಾಚಾರ್**
ಪ್ರಮಾಣೀಕರ್ತಳು

## ಸಾರ್ವಜನಿಕ ಪ್ರಕಟಣಾ ನೋಟೀಸ್

ನನ್ನ ಕಕ್ಷಿದಾರರಾದ **ಶ್ರೀಮತಿ ಪ್ರಭಾವತಿ ಎಸ್. ಗಂಡ ಹಾಲಪ್ಪ**, ವಯಸ್ಸು 47 ವರ್ಷ, ಗೃಹಿಣಿ. ಹಾಲಿವಾಸ : ನಂ. 1906/29, ಸಿದ್ದೇಶ್ವರ ನಿಲಯ, 2ನೇ ಮೇನ್ ರೋಡ್, 5ನೇ ಕ್ರಾಸ್, ವಿದ್ಯಾನಗರ, ದಾವಣಗೆರೆ-577004 ಇವರಿಂದ ದಾವಣಗೆರೆ ಎಂ.ಸಿ.ಸಿ 'ಎ' ಬ್ಲಾಕ್ ವಾಸಿ **ಶ್ರೀಮತಿ ಮೀನಾಕ್ಷಮ್ಮ ಗಂಡ ಲೇಟ್ ಬಾಲಕೃಷ್ಣ ಮತ್ತು ಇವರ ಮೊಮ್ಮಗ ಸಾಗರ್ ಊರನ್‌ಕರ್ ತಂದೆ ಲೇಟ್ ಕೇದಾರೇಶ್ವರ** ಇವರುಗಳು ಬೃಹತ್ ಮೊತ್ತದ ಸಾಲ ಪಡೆದು ಮರುಪಾವತಿ ಮಾಡದೆ ಈ ಕೆಳಕಂಡ ಷೆಡ್ಯೂಲ್ ಸೊತ್ತನ್ನು ಮಾರಾಟ ಮಾಡಿ ಬೇರೆಡೆ ಹೋಗಿ ವಾಸ್ತವ್ಯ ಹೂಡಿ ಹಣ ಎತ್ತಿಹಾಕುವ ತರಾತುರಿಯಲ್ಲಿದ್ದಾರೆ. ಆದ್ದರಿಂದ ಈ ಸಾರ್ವಜನಿಕ ನೋಟೀಸ್.

ಆದ್ದರಿಂದ ಪ್ರತಿವಾದಿಗಳ ವಿರುದ್ಧ ದಾವಣಗೆರೆಯ 3ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಹಿರಿಯ ವಿಭಾಗ ನ್ಯಾಯಾಲಯ ಇಲ್ಲಿ ಹಣ ವಸೂಲಾತಿ ಸಂಬಂಧ ಅಸಲು ದಾವಾ ಸಂಖ್ಯೆ 88/2021 ರ ಅಡಿ ದಾವೆ ದಾಖಲಿಸಿದ್ದು, ಸದರಿ ದಾವೆಯು ಇತ್ಯರ್ಥವಾಗುವವರೆಗೆ ಈ ಕೆಳಗೆ ವಿವರಿಸಿದ ಷೆಡ್ಯೂಲ್ ಸೊತ್ತನ್ನು ಪ್ರತಿವಾದಿಗಳಾಗಲೀ, ಅವರ ಪರ ಯಾರೇ ಅಧಿಕಾರ ಹೊಂದಿದ ವ್ಯಕ್ತಿಗಳು ಮಾರಾಟ, ಹಸ್ತಾಂತರ, ಅಡಮಾನ, ಪರಭಾರೆ, ವಗೈರೆ ಮಾಡದಂತೆ ತಡೆಯಾಜ್ಞೆ ಆದೇಶ ಕೋರಿ ಸಿ.ಪಿ.ಸಿ. ಆದೇಶ 39 ನಿಯಮ 1 ಮತ್ತು 2 ರ ಅಡಿ ಮಧ್ಯಂತರ ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿ ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿ ಇದ್ದು, ದಾವಾ ಮುದ್ದತ್ತು ದಿನಾಂಕ ತುರ್ತು ನೋಟೀಸ್, ಪ್ರತಿವಾದಿಗಳ ಹಾಜರಾತಿ ವಿಚಾರಣೆಗೆಂದು ತಾ : 05-04-2021 ಕ್ಕೆ ನಿಗದಿಯಾಗಿರುತ್ತದೆ. ಈ ರೀತಿ ಅರ್ಜಿಯು ನ್ಯಾಯಾಲಯದಲ್ಲಿ ದಾವಾ ಷೆಡ್ಯೂಲ್ ಸ್ವತ್ತಿನ ಸಂಬಂಧ ಪ್ರತಿವಾದಿಗಳ ವಿರುದ್ಧ ವಿಚಾರಣೆ ಬಾಕಿ ಇರುವಾಗ ಯಾರೇ ವ್ಯಕ್ತಿಗಳಿಂದಾಗಲೀ ಯಾವುದೇ ಸಾರ್ವಜನಿಕರು ಸೊತ್ತನ್ನು ಖರೀದಿ, ಮಾರಾಟ, ಹಸ್ತಾಂತರ ವ್ಯವಹಾರ ಮಾಡಬಾರದಾಗಿ ಈ ಮೂಲಕ ಸಾರ್ವಜನಿಕರಲ್ಲಿ ಪ್ರಕಟಣೆ ನೀಡಲಾಗಿದೆ. ಈ ವಿಚಾರಕ್ಕೂ ಮೀರಿ ಯಾವುದೇ ಸಾರ್ವಜನಿಕರು ಸ್ವತ್ತನ್ನು ಖರೀದಿ, ಮಾರಾಟ, ಹಸ್ತಾಂತರ ವ್ಯವಹಾರ ಮಾಡಿದಲ್ಲಿ ಸದರಿ ದಾವೆಯ ನ್ಯಾಯಾಲಯದ ಆದೇಶಕ್ಕೆ ಮತ್ತು ಕಾನೂನು ಪಾಲನೆಗೆ ಬದ್ದರಿರತಕ್ಕದ್ದು. ಮುಂದೆ ಆಗುವ ಕಾನೂನಿನ ತೊಂದರೆ, ಲುಕ್ಸಾನುಗಳಿಗೆ ಖರೀದಿಸಿದ ವ್ಯಕ್ತಿಗಳೇ ಹೊಣೆಗಾರರಾಗುತ್ತಾರೆ ಎಂದು ಪ್ರಚುರಪಡಿಸಿದ ಸಾರ್ವಜನಿಕ ನೋಟಿಸ್ ಇದಾಗಿರುತ್ತದೆ.

**ಷೆಡ್ಯೂಲ್** : ದಾವಣಗೆರೆ ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಒಳಪಟ್ಟ ಎಂ.ಸಿ.ಸಿ. 'ಎ' ಬ್ಲಾಕ್‌ನಲ್ಲಿ ಬರುವ ಆಸ್ತಿ ಡೋರ್ ನಂ 3714/142 ರ ಅಳತೆ 30x40 ಅಡಿ (2020-2021 ರ ಖಾತೆ ವಹಿಯಲ್ಲಿ ವಿವರಿಸಿದಂತೆ ಗ್ರೌಂಡ್‌ಫ್ಲೋರ್ + ಗ್ರೌಂಡ್ ಫ್ಲೋರ್ + ಫಸ್ಟ್ ಫ್ಲೋರ್ 2100 ಚ.ಅ. ವುಳ್ಳ ಆರ್.ಸಿ.ಸಿ. ಮನೆ) ವುಳ್ಳ ಸೊತ್ತು.

**ಸಹಿ/-**
**ಕಕ್ಷಿದಾರ : ಪ್ರಭಾವತಿ ಎಸ್.**
ದಾವಣಗೆರೆ.
25-03-2021

ಸಹಿ/- (ಕಕ್ಷಿದಾರರ ಪರ ವಕೀಲರು)
**ಯೋಗೇಶ್ವರಪ್ಪ. ಆರ್.**, ಬಿ.ಎ., ಎಲ್‌ಎಲ್.ಬಿ.
ವಕೀಲರು, 705/2, 1ನೇ ಮೇನ್, 10ನೇ ಕ್ರಾಸ್,
ಕೆ.ಬಿ. ಬಡಾವಣೆ, ದಾವಣಗೆರೆ-577002.

## ಸಾರ್ವಜನಿಕರ ಗಮನಕ್ಕೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ನಾನು ಈ ಕೆಳಕಂಡ ಷೆಡ್ಯೂಲ್ ಸೊತ್ತುಗಳ ಬಗ್ಗೆ ಶ್ರೀ ಪ್ರಕಾಶ್ ಹಾಗೂ ಶ್ರೀ ಬಿ.ಪಿ. ಲಲಿತ ಕೋಂ. ಶ್ರೀ ಬಿ. ಪ್ರಕಾಶ್, ದಾವಣಗೆರೆ ಇವರ ಮೇಲೆ ದಾವಣಗೆರೆ ಹಿರಿಯ ಸಿವಿಲ್ ನ್ಯಾಯಾಧೀಶರ ಕೋರ್ಟ್‌ನಲ್ಲಿ ದಾವೆ ಸಂಖ್ಯೆ 2/16 ಹೂಡಿ ಡಿಕ್ರಿ ಪಡೆದಿದ್ದು, ಸದರಿ ಆಸ್ತಿ ನನಗೆ ರಿಜಿಸ್ಟರ್ ಮಾಡಿಕೊಡಲು ಆದೇಶವಾಗಿದೆ.

ಹೀಗಿದ್ದರೂ ಸದರಿ ಷೆಡ್ಯೂಲ್ ಆಸ್ತಿಗಳ ಮೇಲೆ ದಾವಣಗೆರೆ ಅರ್ಬನ್ ಸಹಕಾರಿ ಬ್ಯಾಂಕ್ ನಿಯಮಿತ ಇವರು ಕ್ರಮವಿಟ್ಟು ಹರಾಜು ಮಾಡಲು ನೋಟೀಸ್ ನೀಡಿರುತ್ತಾರೆಂದು ತಿಳಿದುಬಂದಿದೆ. ಸದರಿ ಆಸ್ತಿಗಳ ಮೇಲೆ ಸದರಿ ಪ್ರಕಾಶ್ ಹಾಗೂ ಅವರ ಪತ್ನಿ ಶ್ರೀಮತಿ ಲಲಿತ ಬಿ.ಪಿ. ಇವರಿಗೆ ಈಗ ಯಾವುದೇ ಹಕ್ಕು ಇಲ್ಲದ ಕಾರಣ ಹಾಗೂ ಈ ಬಗ್ಗೆ ಸದರಿ ಶ್ರೀ ಪ್ರಕಾಶ್ ಅವರೇ ಹೈಕೋರ್ಟ್‌ನಲ್ಲಿ ಅಪೀಲು ಹಾಕಿರುವ ಕಾರಣ, ಸದರಿ ಅರ್ಬನ್ ಬ್ಯಾಂಕ್‌ನವರಿಗೆ ಹರಾಜು ಮಾಡಲು ಅಧಿಕಾರವಿರುವುದಿಲ್ಲ. ಕಾರಣ, ಸಾರ್ವಜನಿಕರು ಯಾರೂ ಸದರಿ ಷೆಡ್ಯೂಲ್ ಸೊತ್ತುಗಳ ಬಗ್ಗೆ ಅರ್ಬನ್ ಬ್ಯಾಂಕ್‌ನವರ ಜೊತೆ ಅಥವಾ ಶ್ರೀ ಬಿ. ಪ್ರಕಾಶ್ ಬಿನ್ ಬಿ. ರುದ್ರಪ್ಪ ಹಾಗೂ ಶ್ರೀಮತಿ ಲಲಿತ ಕೋಂ ಶ್ರೀ ಪ್ರಕಾಶ್ ಹಾಗೂ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ದಾವಣಗೆರೆ ಇವರ ಜೊತೆ ಯಾವ ರೀತಿಯಿಂದಲೂ ವ್ಯವಹರಿಸಬಾರದಾಗಿ ಕೋರಿದೆ. ಹಾಗೊಂದು ವೇಳೆ ವ್ಯವಹರಿಸಿದಲ್ಲಿ ಯಾವುದೇ ವ್ಯವಹಾರವು ನನಗೆ ಬಂಧನಕಾರಿ ಆಗುವುದಿಲ್ಲ. ಮುಂದ ಆಗುವ ನಷ್ಟ ಹಾಗೂ ತೊಂದರೆಗಳಿಗೆ ನೀವೇ ಜವಾಬ್ದಾರರಾಗುವಿರಿ.

**ಷೆಡ್ಯೂಲ್** : ದಾವಣಗೆರೆ ಸಿಟಿ ವಿನೋಬನಗರ, 2ನೇ ಮೇನ್, 4ನೇ ಕ್ರಾಸ್‌ನಲ್ಲಿರುವ ಸೈಟ್ ನಂ. 115, ಡೋರ್ ನಂ. 1059/1 ಹಾಗೂ 1059/1A, ಖಾತಾ ಸಂಖ್ಯೆ 554 ಹಾಗೂ 555 ಅಳತೆ, ಪೂರ್ವ-ಪಶ್ಚಿಮ 15 ಅಡಿ ಹಾಗೂ ಉತ್ತರ-ದಕ್ಷಿಣ 44 ಅಡಿ ಅಳತೆಯ ನೆಲ ಅಂತಸ್ತು ಹಾಗೂ ಒಂದನೇ ಅಂತಸ್ತುವುಳ್ಳ ಆರ್.ಸಿ.ಸಿ. ರೂಫಿಂಗ್‌ನ ವಾಸೋಪಯೋಗದ ಮನೆ ಹಾಗೂ ಇದಕ್ಕೆ ಚಕ್ಕುಬಂದಿ : ಪೂರ್ವ : ಹೆಚ್.ಎಂ. ರುದ್ರೇಶ್ ಇವರ ಸೊತ್ತು, ಪಶ್ಚಿಮ : ಆರ್.ಎಸ್. ಸರೋಜಮ್ಮನವರ ಇದೇ ಸೈಟ್‌ನಲ್ಲಿನ ಸೊತ್ತು, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ಕನ್ಸರ್‌ವೆನ್ಸಿ

ದಾವಣಗೆರೆ
ದಿನಾಂಕ 25-03-2021

ಸಹಿ/-
**ಹೆಚ್. ತಿಪ್ಪಣ್ಣ ಬಿನ್ ಹೆಚ್. ಗುರುಸಿದ್ದಪ್ಪ**
ಡೋರ್ ನಂ. 1880/3A-3B, 4ನೇ ಮೇನ್,
1ನೇ ಕ್ರಾಸ್, ವಿನೋಬನಗರ, ದಾವಣಗೆರೆ-06

